ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಸ್ವಾತಂತ್ರ್ಯ ಅಮೃತ ಮಹೋತ್ಸವ ಪುಸ್ತಕ ಮಾಲೆ

## ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

# ಅಂಕೋಲಾ


ಪ್ರಧಾನ ಸಂಪಾದಕರು

**ಡಾ. ಬಿ.ವಿ. ವಸಂತಕುಮಾರ್**

ಸಂಪಾದಕರು

**ಕೋಡಿಬೆಟ್ಟು ರಾಜಲಕ್ಷ್ಮಿ**

ಲೇಖಕರು

**ಶಾಂತಾರಾಮ ನಾಯಕ, ಹಿಚಕಡ**



**ಕರ್ನಾಟಕ ಸಾಹಿತ್ಯ ಅಕಾಡೆಮಿ**

ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–೫೬೦ ೦೦೨

ದೂರವಾಣಿ: ೦೮೦–೨೨೨೧೧೭೩೦ / ೨೨೧೦೬೪೬೦

www.karnatakasahithyaacademy.org

ಇ–ಮೇಲ್: sahithya.academy@gmail.com

**ANKOLA:** An Introducing Book on the Places in Karnataka that Played a Major Role in the Freedom Struggle, Written by Shantarama Nayak, Published by Kariyappa N., Registrar, Karnataka Sahithya Academy, Kannada Bhavana, J.C. Road, Bengaluru-560002

ಹಕ್ಕು: ಕರ್ನಾಟಕ ಸಾಹಿತ್ಯ ಅಕಾಡೆಮಿ

**ಪ್ರಧಾನ ಸಂಪಾದಕರು**
ಡಾ. ಬಿ.ವಿ. ವಸಂತಕುಮಾರ್
ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ

**ಸಂಪಾದಕ ಮಂಡಳಿ**
ಡಾ. ಎಸ್. ಜಿ. ರಾಮದಾಸ ರೆಡ್ಡಿ
ಡಾ. ಮೃತ್ಯುಂಜಯ ರುಮಾಲೆ
ಶ್ರೀ ನರೇಂದ್ರಕುಮಾರ್ ಎಸ್.ಎಸ್.
ಡಾ. ಪ್ರಕಾಶ ಗ. ಖಾಡೆ
ಶ್ರೀಮತಿ ಕೋಡಿಬೆಟ್ಟು ರಾಜಲಕ್ಷ್ಮಿ

**ಲೇಖಕರು**
ಶಾಂತಾರಾಮ ನಾಯಕ, ಹಿಚಕಡ

ಮೊದಲ ಮುದ್ರಣ: ೨೦೨೨
ಪ್ರತಿಗಳು: ೧೦೦೦
ಬೆಲೆ: ರೂ. ೩೦/-
ಪುಟ: ೫೬

ಮುಖಪುಟ ಚಿತ್ರ: ಮುರಳೀಧರ ವಿ. ರಾಥೋಡ್

ಪ್ರಕಾಶಕರು:
ಕರಿಯಪ್ಪ ಎನ್., ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ

ಮುದ್ರಕರು
**ರಶ್ಮಿ ಪ್ರಿಂಟರ್ಸ್**
ಸುಧಾಮನಗರ, ಬೆಂಗಳೂರು
ಮೊ: ೯೯೦೧೯೧೬೫೮೧

**ಬಸವರಾಜ ಬೊಮ್ಮಾಯಿ**
ಮುಖ್ಯಮಂತ್ರಿ

ವಿಧಾನಸೌಧ
ಬೆಂಗಳೂರು–560 001



## ಶುಭ ಸಂದೇಶ

ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭದಲ್ಲಿ ದೇಶದಾದ್ಯಂತ ದೇಶಪ್ರೇಮವನ್ನು ಬೆಳೆಸುವ ಸಾವಿರಾರು ಕಾರ್ಯಕ್ರಮಗಳು ನಡೆಯುತ್ತಿರುವ ಹೊತ್ತಿನಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕರ್ನಾಟಕದ ೩೧ ಜಿಲ್ಲೆಗಳಲ್ಲಿ ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ೭೫ ಸ್ಥಳಗಳನ್ನು ಗುರುತಿಸಿ, ೭೫ ಪುಸ್ತಕಗಳನ್ನು ಹೊರತರುತ್ತಿರುವುದು ಸಂತೋಷದ ವಿಚಾರ.

ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕರ್ನಾಟಕದ ಕೊಡುಗೆ ಬಹಳ ಮಹತ್ವದ್ದು. ಕರ್ನಾಟಕದ ಹಲವು ಮಹನೀಯರು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ನಡೆಸಿದ ತ್ಯಾಗ ಬಲಿದಾನಗಳು ಅಪಾರ. ಅಂತೆಯೇ ಕರ್ನಾಟಕದ ಸಾವಿರಾರು ಸ್ಥಳಗಳು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿ ನಿಂತಿವೆ. ವಿದುರಾಶ್ವತ್ಥ, ಈಸೂರು, ಶಿವಪುರಗಳನ್ನೂ ಒಳಗೊಂಡಂತೆ ಕರ್ನಾಟಕದ ೩೧ ಜಿಲ್ಲೆಗಳ ಸಾವಿರಾರು ಸ್ಥಳಗಳಲ್ಲಿ ಭಾರತದ ಸ್ವಾತಂತ್ರ್ಯ ಸಂಗ್ರಾಮವು ನಡೆದುದಕ್ಕೆ ಸಾಕ್ಷಿಯಾಗಿ ಹಲವಾರು ಕುರುಹುಗಳು, ಅವಶೇಷಗಳು, ಸ್ಮಾರಕಗಳು ಇತಿಹಾಸದ ಪುಟಗಳಲ್ಲಿ ದಾಖಲಾಗಿವೆ. ಆದಾಗ್ಯೂ ಇನ್ನೂ ದಾಖಲಾಗಬೇಕಾದ ಸಂಗತಿಗಳು ಉಳಿದಿವೆ. ಭಾರತ ಸ್ವಾತಂತ್ರ್ಯದ ಅಮೃತೋತ್ಸವದ ಸಂದರ್ಭದಲ್ಲಿ ಈ ಎಲ್ಲ ಅಂಶಗಳನ್ನು ದಾಖಲಿಸುವ ಕೆಲಸ ತುರ್ತಾಗಿ ಆಗಬೇಕಾಗಿದೆ.

ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ಕರ್ನಾಟಕದ ವಿವಿಧ ಸ್ಥಳದಲ್ಲಿ ನಡೆದ ಘಟನೆಗಳು, ತ್ಯಾಗ, ಬಲಿದಾನಗಳು, ಹೋರಾಟಗಳು ಇತ್ಯಾದಿ

ವಿವರಗಳೆಲ್ಲವನ್ನೂ ಪುಸ್ತಕ ರೂಪದಲ್ಲಿ ದಾಖಲಿಸುವ ಮೂಲಕ, ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಕೊಡುಗೆಯ ಮೇಲೆ ಬೆಳಕು ಚೆಲ್ಲುವ ಪ್ರಯತ್ನವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಡಿದೆ. ಇದು ನಿಜಕ್ಕೂ ಒಂದು ಸಂಶೋಧನಾತ್ಮಕ ಪ್ರಯತ್ನವೇ ಸರಿ.

ಈ ಸಾರ್ಥಕ ಕಾರ್ಯವನ್ನು ಯಶಸ್ವಿಗೊಳಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರು ಹಾಗೂ ಬಳಗದವರನ್ನು ನಾನು ಮನಃಪೂರ್ವಕವಾಗಿ ಅಭಿನಂದಿಸುತ್ತೇನೆ.

ಎಲ್ಲರಿಗೂ ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಶುಭಾಶಯಗಳು.

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ
ಕರ್ನಾಟಕ ಸರ್ಕಾರ

**ವಿ ಸುನಿಲ್ ಕುಮಾರ್**



ಸ್ವಾತಂತ್ರ್ಯದ ಅಮೃತಮಹೋತ್ಸವ

ಇಂಧನ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು

## ಶುಭ ಸಂದೇಶ

**‘ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ’**

ಜಗತ್ತಿನಲ್ಲಿ ಭಾರತ ಒಂದು ವಿಶಿಷ್ಟವಾದ ಮಹತ್ವದ ರಾಷ್ಟ್ರ. ವಿಶ್ವಕ್ಕೆ ವಿಶ್ವಮಾನವನನ್ನು, ವಿಶ್ವಕುಟುಂಬವನ್ನು, ವಿಶ್ವನಾಥನನ್ನು, ಜಗನ್ಮಾತೆಯನ್ನು ನೀಡಿರುವ ಆಧ್ಯಾತ್ಮದ ಪುಣ್ಯಭೂಮಿ. ವೇದ, ಉಪನಿಷತ್ತುಗಳ ಕಾಲದಿಂದ ಹಿಡಿದು, ರಾಮ, ಕೃಷ್ಣ, ಶಿವ, ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್, ಮೈತ್ರೇಯಿ, ಗಾರ್ಗಿ, ಅರುಂಧತಿ, ಸೀತೆ, ಮಂಡೋದರಿ, ಮೀರಾ, ಅಕ್ಕಮಹಾದೇವಿ ಮೊದಲಾದ ಪೌರಾಣಿಕ, ಐತಿಹಾಸಿಕ ವ್ಯಕ್ತಿತ್ವಗಳ ಅಂತಃಶಕ್ತಿಯಿಂದ ಜಗತ್ತನ್ನು ಬೆಳಗಿದ ದೇಶ ಭಾರತ. ಇಂಥ ದೇಶದ ಮೇಲೆ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗೆ ಆಕ್ರಮಣ ಮಾಡಲು ಪ್ರಯತ್ನಿಸಿ, ಸೋತು ಭಾರತೀಯ ಸಂಸ್ಕೃತಿಯ ಅಗಾಧತೆಗೆ ಶರಣಾಗಿ ಭಾರತೀಯರೇ ಆಗಿಹೋಗಿದ್ದಾರೆ. ಹಾಗೇ ಭಾರತವನ್ನು ಭಾರತವನ್ನಾಗಿ ಉಳಿಸಿರುವ ಮಹಾನ್ ಶಕ್ತಿಯೇ ಸ್ವಾತಂತ್ರ್ಯದ ತೀವ್ರ ತುಡಿತ.

ಭಾರತದ ಸ್ವಾತಂತ್ರ್ಯ ಸಂಗ್ರಾಮ ಸುಮಾರು ಮುನ್ನೂರು ವರ್ಷಗಳಿಗೂ ಹಳೆಯದು. ಇಡೀ ಭಾರತವೇ ಬ್ರಿಟಿಷರ ವಿರುದ್ಧ ಹೋರಾಡಿ ದಾಸ್ಯದಿಂದ ಮುಕ್ತವಾಗಿ ಸ್ವಾತಂತ್ರ್ಯವನ್ನು ಪಡೆದುಕೊಂಡು ಈಗ ೭೫ ವರ್ಷಗಳಾಗಿವೆ. ಈ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭವನ್ನು ಅರ್ಥಪೂರ್ಣವಾಗಿ ಆಚರಿಸಬೇಕಾದ್ದು ನಮ್ಮೆಲ್ಲರ ಕರ್ತವ್ಯ.

ಇಡೀ ದೇಶವನ್ನೇ ಜಾಗೃತಗೊಳಿಸಿದ ಭಾರತದ ಸ್ವಾತಂತ್ರ್ಯ ಸಂಗ್ರಾಮ,

ನಮ್ಮ ಕರ್ನಾಟಕದಲ್ಲಿಯೂ ಸಹ ಸ್ವಾತಂತ್ರ್ಯ ಸಂಗ್ರಾಮದ ಪಾಂಚಜನ್ಯವನ್ನು ಮೊಳಗಿಸಿತು. ಕರ್ನಾಟಕದ ಕಲಿಗಳು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿ, ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ವಿಶಿಷ್ಟ ಕೊಡುಗೆ ನೀಡಿರುವುದನ್ನು ಸ್ಮರಿಸಬೇಕಿದೆ. ಕರ್ನಾಟಕದಲ್ಲಿ ಸಾವಿರಾರು ಸ್ವಾತಂತ್ರ್ಯ ಹೋರಾಟದ ಘಟನೆಗಳನ್ನು ಸಾರುವ ಐತಿಹಾಸಿಕ ಸ್ಥಳಗಳಿವೆ. ಅಂಥ ಸ್ಥಳಗಳು ಅರಿವಿಗೆ ಬಾರದೆ ಮರೆಯಾಗಿ ಹೋಗುತ್ತಿವೆ. ಸ್ವಾತಂತ್ರ್ಯದ ಹಣತೆ ಹೊತ್ತಿಸಿದ ಪ್ರಮುಖ ಸ್ಥಳಗಳಲ್ಲಿ ತ್ಯಾಗ, ಬಲಿದಾನಗಳನ್ನು ನೆನಪಿಸುವ ನಿಟ್ಟಿನಲ್ಲಿ ಮತ್ತು ಇಂದಿನ ಪೀಳಿಗೆಗೆ ತಿಳಿಸಿಕೊಡುವ ಕೆಲಸ ಈ ಅಮೃತ ಮಹೋತ್ಸವದ ಸಂದರ್ಭದಲ್ಲಿ ಆಗುತ್ತಿರುವುದು ಸಂತಸದ ವಿಷಯ. ಈ ನಿಟ್ಟಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಒಂದು ಬೃಹತ್ ಆಂದೋಲನವನ್ನು ಹಮ್ಮಿಕೊಂಡಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಐತಿಹಾಸಿಕ ಮಹತ್ವಗಳನ್ನು ತಿಳಿಸಿಕೊಡುವ ೭೫ ಸ್ಥಳಗಳ ಬಗ್ಗೆ ೭೫ ವಿವಿಧ ಲೇಖಕರಿಂದ ಒಟ್ಟು ೭೫ ಪುಸ್ತಕಗಳನ್ನು, ಅದರ ತಲಾ ೧೦೦೦ ಪ್ರತಿಯಂತೆ ೭೫೦೦೦ ಪ್ರತಿಗಳನ್ನು ಎರಡು ತಿಂಗಳಲ್ಲಿ ಬರೆಯಿಸಿ, ಮುದ್ರಿಸಿ ಓದುಗರಿಗೆ ತಲುಪಿಸುತ್ತಿರುವುದು ನಿಜಕ್ಕೂ ಹೆಮ್ಮೆಯ ವಿಷಯ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರತಿಯೊಬ್ಬರನ್ನೂ ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ.

ನಾವೆಲ್ಲರೂ ಕೂಡಿ ನಮ್ಮ ನಮ್ಮ ಮನೆಮನಗಳಿಂದ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ, ಪರಂಪರೆಗಳನ್ನು ಬೆಳೆಸೋಣ. ರಸಋಷಿ ಕುವೆಂಪು ಅವರು ಹೇಳಿರುವ 'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ' ಎಂಬ ಆದರ್ಶದೊಂದಿಗೆ ಕರ್ನಾಟಕದ ಮೂಲಕ ಭಾರತವನ್ನೂ, ಭಾರತದ ಮೂಲಕ ಕರ್ನಾಟಕವನ್ನೂ ಅಭಿನ್ನಗೊಳಿಸೋಣ, ಬಲಿಷ್ಠಗೊಳಿಸೋಣ. ಭವ್ಯ ಕರ್ನಾಟಕ, ಭವ್ಯ ಭಾರತ ನಿರ್ಮಿಸೋಣ.

**(ವಿ ಸುನಿಲ್ ಕುಮಾರ್)**
ಇಂಧನ, ಕನ್ನಡ ಮತ್ತು ಸಂಸ್ಕೃತಿ
ಇಲಾಖೆ ಸಚಿವರು

## ಪ್ರಧಾನ ಸಂಪಾದಕರ ಮಾತು

ಸ್ವಾತಂತ್ರ್ಯ ಎಂಬುದು ಲೌಕಿಕವಾಗಿಯೂ ಲೋಕೋತ್ತರವಾಗಿಯೂ ಮಹೋನ್ನತವಾದ ಮೌಲ್ಯ. ಭಾರತೀಯ ಸಂಸ್ಕೃತಿಯು ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಪುರುಷಾರ್ಥವೆಂದು ಕರೆದಿದೆ. ಮೋಕ್ಷವೆಂದರೆ ಬಿಡುಗಡೆ, ಸ್ವಾತಂತ್ರ್ಯ ಎಂದರ್ಥ. ಹುಟ್ಟು ಸಾವುಗಳಿಂದ ಬಿಡುಗಡೆ ಎಂಬುದು ಲೋಕೋತ್ತರವಾದ ಅರ್ಥವಾದರೆ, ಸಾವಿಲ್ಲದ, ನೋವಿಲ್ಲದ ಸ್ಥಿತಿಗಾಗಿ ಕಲ್ಯಾಣ ನಾಡಿನ ನಿರ್ಮಾಣಕ್ಕಾಗಿ ನಾವು ಗಳಿಸುವ ನಮ್ಮ ಸ್ವಯಂ ನಿಯಂತ್ರಣದ ಸ್ವಾತಂತ್ರ್ಯ ಎಂಬುದು ಲೌಕಿಕವಾದ ಅರ್ಥ. ಲೌಕಿಕ ಹಾಗೂ ಅಲೌಕಿಕಗಳು ಪರಸ್ಪರ ವಿರೋಧಿಗಳಲ್ಲ; ಅವು ಪರಸ್ಪರ ಪೂರಕವಾದವು. ಲೋಕವನ್ನು ಲೋಕೋತ್ತರದ ಔನ್ನತ್ಯಕ್ಕೆ ಏರಿಸುವ ದರ್ಶನವೇ ಭಾರತೀಯ ದರ್ಶನ. ಸ್ವಾತಂತ್ರ್ಯ ನಮ್ಮ ಧರ್ಮ, ನಮ್ಮ ಆತ್ಮ, ನಮ್ಮ ಜೀವನದ ಪರಮ ಪುರುಷಾರ್ಥ. ಅದನ್ನು ಬಯಲು ಎಂದೂ ಕರೆದಿದ್ದಾರೆ. ಅಂತಹ ಸ್ವಾತಂತ್ರ್ಯಕ್ಕಾಗಿ ಭಾರತವು ತನ್ನ ಪುರಾತನ ಕಾಲದಿಂದಲೂ ಬದುಕುತ್ತಾ ಬಂದಿದೆ. ಸ್ವಾತಂತ್ರ್ಯಕ್ಕೆ ಚ್ಯುತಿ ಬಂದಾಗಲೆಲ್ಲ ಭಾರತೀಯರು ಭರತಮಾತೆಯ ಪದತಲದಲ್ಲಿ ತಮ್ಮ ತನು–ಮನ–ಧನಗಳನ್ನು ಅರ್ಪಿಸಿದ್ದಾರೆ. ಅದನ್ನು ರಸಋಷಿ ಕುವೆಂಪು ಅವರು "ಇಂದು ರಕ್ತದ ಬಿಂದು ನಾಳೆ ಸೌಖ್ಯದ ಸಿಂಧು" ಎಂದು ಕರೆದಿದ್ದಾರೆ.

ನಮ್ಮ ದೇಶದ ಸ್ವಾತಂತ್ರ್ಯ ಎಂದರೆ ಅದು ತ್ಯಾಗ, ಬಲಿದಾನಗಳ ಫಲ. ಭಾರತದ ಮೇಲೆ ದಾಳಿ ಮಾಡಲು ಬಂದ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗಿನ ಎಲ್ಲ ದಾಳಿಕೋರರ ಕ್ರೌರ್ಯವನ್ನು ಮೆಟ್ಟಿ ನಿಂತು ಭಾರತೀಯರು ಭಾರತಾಂಬೆಯ ಆತ್ಮಗೌರವವನ್ನು ಎತ್ತಿಹಿಡಿದಿರುವುದರ ಪ್ರತೀಕ ನಮ್ಮ ಸ್ವಾತಂತ್ರ್ಯ.

ಪ್ರಸ್ತುತ ೧೫.೦೮.೧೯೪೭ ರಂದು ನಾವು ಗಳಿಸಿದ ಸ್ವಾತಂತ್ರ್ಯದ ಅಮೃತಘಳಿಗೆಗೆ ಇದೀಗ ೧೫.೦೮.೨೦೨೧ಕ್ಕೆ ೭೫ನೆಯ ಸ್ವಾತಂತ್ರ್ಯ ಅಮೃತ ಮಹೋತ್ಸವ ಸಂಭ್ರಮ. ೧೫.೦೮.೨೦೨೨ಕ್ಕೆ ೭೫ ವರ್ಷಗಳನ್ನು ಪೂರೈಸಿ ೭೬ನೆಯ ಸ್ವಾತಂತ್ರ್ಯೋತ್ಸವದ ಆತ್ಮನಿರ್ಭರ ಭಾರತದ ನವನಿರ್ಮಾಣದ ಅವಕಾಶಗಳ ಸಂಭ್ರಮ. ಈ ಒಂದು ವರ್ಷ ಕಾಲ ಭಾರತ ಸರ್ಕಾರ, ಕರ್ನಾಟಕ ಸರ್ಕಾರ "ಸ್ವಾತಂತ್ರ್ಯದ ಅಮೃತ ಮಹೋತ್ಸವ"ವನ್ನು ಆಚರಿಸುತ್ತಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಆಗಸ್ಟ್– ೨೦೨೧ರ ತಿಂಗಳು ಪೂರ್ತಿ "ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ" ಎಂಬ ಹೆಸರಿನಲ್ಲಿ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ನಡೆದಿರುವ ಸ್ವಾತಂತ್ರ್ಯ ಹೋರಾಟ ಕುರಿತ ಆನ್ಲೈನ್ ಉಪನ್ಯಾಸಗಳನ್ನು ನಡೆಸಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರಾದ ಶ್ರೀ ಸುನಿಲ್ ಕುಮಾರ್ ಅವರು ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ರಾಜ್ಯಾದ್ಯಂತ ಬೃಹತ್ ಸ್ವರೂಪದಲ್ಲಿ ಅರ್ಥಪೂರ್ಣವಾಗಿ ಆಚರಿಸಬೇಕೆಂದು ತೀರ್ಮಾನಿಸಿದ್ದಾರೆ. ಅವರಿಗೆ ರಾಜ್ಯದ ೭೫ ಸ್ಥಳಗಳಲ್ಲಿ ೭೫ ಸ್ವಾತಂತ್ರ್ಯ ಜಾಥಾಗಳು ನಡೆಯಬೇಕು, ಎಲ್ಲ ಜಿಲ್ಲೆಗಳಿಂದ ರಥಯಾತ್ರೆ ಆಗಬೇಕು, ಬೆಂಗಳೂರು ಮಹಾನಗರದಲ್ಲಿ ಮೂರು ದಿನಗಳ ಸಮಾವೇಶ, ಪ್ರದರ್ಶನಿ, ಪುಸ್ತಕ ಮಾರಾಟ ಮೊದಲಾದ ಹತ್ತು ಹಲವು ಚಟುವಟಿಕೆಗಳನ್ನು ನಡೆಸುವ ಮೂಲಕ ಹೊಸ ತಲೆಮಾರಿಗೆ ಸ್ವಾತಂತ್ರ್ಯದ ಅಮೃತವನ್ನುಣಿಸಬೇಕೆಂಬ ಕನಸಿದೆ. ಅದರ ಭಾಗವಾಗಿ ಅವರು ರಾಜ್ಯದ ೭೫ ಸ್ವಾತಂತ್ರ್ಯ ಹೋರಾಟದ ಸ್ಥಳಗಳನ್ನು ಗುರುತಿಸಿ ೭೫ ಕಿರುಹೊತ್ತಿಗೆಗಳನ್ನು ಬರೆಸಿ ಪ್ರಕಟಿಸುವ ಜವಾಬ್ದಾರಿಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ವಹಿಸಿದ್ದಾರೆ. ನಮಗೆ ಜವಾಬ್ದಾರಿ ವಹಿಸಿದ್ದು ದಿನಾಂಕ: ೩೦.೧೧.೨೦೨೧ರಂದು ಮಾನ್ಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ. ಅಂದಿನಿಂದಲೇ ಕಾರ್ಯಪ್ರವೃತ್ತರಾದ ನಾವು ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲ ಜಿಲ್ಲಾ ಸಹಾಯಕ ನಿರ್ದೇಶಕರಿಂದ ಸ್ಥಳಗಳ ಮಾಹಿತಿ ಪಡೆದೆವು. ಜೊತೆಗೆ ರಾಜ್ಯದ ಐದು ಜನರನ್ನು ಸಂಪಾದಕರನ್ನಾಗಿ ನಿಯೋಜಿಸಿ ದಿನಾಂಕ: ೦೩.೧೨.೨೦೨೧ರಂದು ಅಕಾಡೆಮಿಯಲ್ಲಿ ಸಂಪಾದಕರ ಸಭೆ ನಡೆಸಿದೆವು. ಸಂಪಾದಕರಾಗಿ ಡಾ. ಮೃತ್ಯುಂಜಯ ರುಮಾಲೆ, ಹೊಸಪೇಟೆ, ಡಾ. ಎಸ್. ಜಿ. ರಾಮದಾಸ ರೆಡ್ಡಿ, ಮೈಸೂರು, ಡಾ. ಪ್ರಕಾಶ ಗ. ಖಾಡೆ, ಬಾಗಲಕೋಟೆ,



ಶ್ರೀ ನರೇಂದ್ರಕುಮಾರ್ ಎಸ್.ಎಸ್., ಬೆಂಗಳೂರು ಹಾಗೂ ಶ್ರೀಮತಿ ರಾಜಲಕ್ಷ್ಮಿ ಕೋಡಿಬೆಟ್ಟು, ಮಂಗಳೂರು ಇವರೊಂದಿಗೆ ಎಲ್ಲ ಸ್ಥಳಗಳ ಬಗ್ಗೆ ಚರ್ಚಿಸಿ ೭೫ ಸ್ಥಳಗಳನ್ನು ಆಯ್ಕೆ ಮಾಡಿದೆವು. ಒಬ್ಬೊಬ್ಬ ಸಂಪಾದಕರಿಗೆ ೧೫ ಸ್ಥಳಗಳನ್ನು ಹಂಚಿ, ೧೫ ಲೇಖಕರಿಂದ ೧೫ ಕಿರುಪುಸ್ತಕಗಳನ್ನು ಬರೆಯಿಸಿಕೊಡುವ ಜವಾಬ್ದಾರಿ ನೀಡಿದೆವು. ಎರಡು ತಿಂಗಳ ಅವಧಿಯಲ್ಲಿ ಈ ೭೫ ಪುಸ್ತಕಗಳು ಪ್ರಕಟವಾಗುತ್ತಿವೆ. ಈ ಕೃತಿಗಳು ಇತಿಹಾಸದ ಶಾಸ್ತ್ರೀಯ ಮಾದರಿ, ವರದಿಯ ಕಥನ ಮಾದರಿ ಹಾಗೂ ಸೃಜನಶೀಲ ಅಭಿವ್ಯಕ್ತಿಯ ಸಾಹಿತ್ಯ ಮಾದರಿಗಳಿಂದ ಕೂಡಿರುವುದು ಗಮನಾರ್ಹ. ಅತೀ ಕಡಿಮೆ ಅವಧಿಯಲ್ಲಿ ಕ್ಷೇತ್ರಕಾರ್ಯ ಮತ್ತು ಅಧ್ಯಯನ ಮಾಡಿ ಮೌಲಿಕವಾದ ಕೃತಿಗಳನ್ನು ಬರೆದುಕೊಟ್ಟಿರುವ ಎಲ್ಲಾ ಲೇಖಕರ, ಸಂಪಾದಕರ ಶ್ರಮ ಸಾರ್ಥಕತೆ ಪಡೆದಿದೆ. ಈ ನಿಟ್ಟಿನ ಅಧ್ಯಯನಗಳಿಗೆ ಈ ಕೃತಿಗಳು ಪ್ರೇರೇಪಿಸುತ್ತವೆ. ಇದೊಂದು ತುರ್ತಾದ ಆಂದೋಲನಾತ್ಮಕವಾದ ಪ್ರಯತ್ನ. ಇದಕ್ಕೆ ಸಂಪೂರ್ಣ ಸಹಕಾರ ನೀಡಿದ ಮಾನ್ಯ ಸಚಿವರಾದ ಶ್ರೀ ವಿ ಸುನಿಲ್ ಕುಮಾರ್ ಅವರಿಗೆ, ಎಲ್ಲಾ ಸಂಪಾದಕರಿಗೆ, ಎಲ್ಲಾ ಲೇಖಕರಿಗೆ, ಇಲಾಖೆಯ ಕಾರ್ಯದರ್ಶಿಗಳಾದ ಡಾ. ಎನ್. ಮಂಜುಳಾ ಅವರಿಗೆ, ನಿರ್ದೇಶಕರಾದ ಶ್ರೀ ಎಸ್. ರಂಗಪ್ಪ ಅವರಿಗೆ, ಜಂಟಿ ನಿರ್ದೇಶಕರಾದ ಶ್ರೀ ಅಶೋಕ್ ಎನ್. ಚಲವಾದಿ ಅವರಿಗೆ ಹಾಗೂ ಎಲ್ಲಾ ಅಧಿಕಾರಿ ವರ್ಗಕ್ಕೆ ಸಾಹಿತ್ಯ ಅಕಾಡೆಮಿಯ ಸರ್ವ ಸದಸ್ಯರಿಗೆ ಪ್ರೀತಿಯಿಂದ ವಂದಿಸುತ್ತೇನೆ. ಯೋಜನೆ ಪೂರ್ಣಗೊಳ್ಳಲು ವಿಶೇಷವಾಗಿ ನೆರವಾದ ಮಿತ್ರರಾದ ಶ್ರೀ ಮಾಲತೀಶ್ ಭಟ್, ಶ್ರೀ ಹರ್ಷ ನಾರಾಯಣ, ಶ್ರೀಮತಿ ನಯನಾ ಎಸ್. ಅವರನ್ನು ನೆನೆಯುತ್ತಾ ವಂದಿಸುತ್ತೇನೆ. ಕಡಿಮೆ ಅವಧಿಯಲ್ಲಿ ಹಗಲಿರುಳು ಶ್ರಮಿಸಿದ ದಣಿವರಿಯದ ದುಡಿಮೆಗಾರರಾದ ರಿಜಿಸ್ಟ್ರಾರ್ ಎನ್. ಕರಿಯಪ್ಪ, ನಮ್ಮ ಬಳಗ ವಿ. ಹರೀಶ್‌ಕುಮಾರ್, ಹರೀಶ್, ಸೈಯದ್ ಜಾವೀದ್, ಸುಚಿತ್ರ ಎಸ್. ಜಿ., ಗೋಪಾಲ ಎನ್., ಸುನೀಲ್ ಅವರಿಗೆ ಹಾಗೂ ಸುಂದರವಾಗಿ ಮುದ್ರಿಸಿದ ರಶ್ಮಿ ಪ್ರಿಂಟರ್ಸ್ ಬಳಗಕ್ಕೆ, ಮುಖಪುಟ ರಚಿಸಿಕೊಟ್ಟ ಶ್ರೀ ಮುರಳೀಧರ ವಿ. ರಾಥೋಡ್ ಅವರಿಗೆ ವಂದಿಸುತ್ತೇನೆ.

**ಬಿ. ವಿ. ವಸಂತಕುಮಾರ್**
ಅಧ್ಯಕ್ಷರು

# ಲೇಖಕರ ಮಾತು

ಭಾರತದ ಸ್ವಾತಂತ್ರ್ಯ ಸಂಗ್ರಾಮದ ಚರಿತ್ರೆಯಲ್ಲಿ ಮೈನವಿರೇಳಿಸುವ ಘಟನೆಗಳಿಂದ ಕೂಡಿದ ಅಂಕೋಲಾ ತಾಲ್ಲೂಕಿನ ಸ್ವಾತಂತ್ರ್ಯ ಹೋರಾಟದ ಕಥೆ ಒಂದು ಸುವರ್ಣ ಅಧ್ಯಾಯ. ಅಂಕೋಲಾ ತಾಲ್ಲೂಕಿಗೆ ಅಪೂರ್ವವಾದ ಸಾಹಸ, ತ್ಯಾಗದ ರೋಚಕ ಇತಿಹಾಸವಿದ್ದರೂ ನಮ್ಮ ಇತಿಹಾಸ ಪ್ರಜ್ಞೆಯ ಕೊರತೆಯಿಂದ ಅದು ಚರಿತ್ರೆಯಲ್ಲಿ ಸಮಗ್ರವಾಗಿ ದಾಖಲಾಗಿಲ್ಲ. ಸಾಮಾನ್ಯರ ಅಸಾಮಾನ್ಯ ಸ್ವಾತಂತ್ರ್ಯ ಹೋರಾಟ ಎಂದೆಂದಿಗೂ ಉಜ್ವಲ ದೇಶಪ್ರೇಮ ಸ್ಫೂರ್ತಿ ಪ್ರೇರಣೆಯ ಚರಿತ್ರೆಯಾಗಿದೆ.

ಅಂಕೋಲಾ ತಾಲ್ಲೂಕು ೧೯೨೦ರ ಸ್ವದೇಶಿ ಮತ್ತು ಅಸಹಕಾರ ಚಳವಳಿಯಿಂದ ಪ್ರಾರಂಭಿಸಿ ಸುಮಾರು ಮೂರು ದಶಕಗಳ ಕಾಲ ನಿರಂತರವಾಗಿ ಹೋರಾಟದ ಕೆಂಡದ ಕೊಂಡ ಹಾದು ಬಂದು, ಒಂದು ಅದ್ಭುತ ಚರಿತ್ರೆ ನಿರ್ಮಾಣವಾಗಿದೆ. ಇಂದು ಈ ಇತಿಹಾಸ ವಿಸ್ಮೃತಿಗೆ ಒಳಗಾಗಿರುವುದು ವಿಷಾದನೀಯ.

ಸ್ವಾತಂತ್ರ್ಯದ ಅಮೃತ ಮಹೋತ್ಸವದ ಈ ಸಂದರ್ಭದಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯವರು ಸ್ವಾತಂತ್ರ್ಯ ಹೋರಾಟದ ಕುರಿತು ಕಿರು ಪುಸ್ತಕಗಳನ್ನು ಪ್ರಕಟಿಸುತ್ತಿರುವುದು ತುಂಬಾ ಸ್ವಾಗತಾರ್ಹವೂ ಹಾಗೂ ಅಭಿನಂದನೀಯವೂ ಆದ ಕಾರ್ಯವಾಗಿದೆ. ಈ ಕಾರ್ಯಕ್ರಮದ ಅಂಗವಾಗಿ 'ಸ್ವಾತಂತ್ರ್ಯ ಹೋರಾಟದಲ್ಲಿ ಅಂಕೋಲೆ' ಎಂಬ ಕಿರು ಹೊತ್ತಿಗೆಯನ್ನು ರಚಿಸುವ ಅವಕಾಶವನ್ನು ನನಗೆ ನೀಡಿರುವ ಸಾಹಿತ್ಯ ಅಕಾಡೆಮಿಗೂ ಹಾಗೂ ಅಕಾಡಮಿಯ ಪರವಾಗಿ ನನ್ನನ್ನು ಸಂಪರ್ಕಿಸಿ ಅವಶ್ಯಕ ಮಾಹಿತಿಯನ್ನು ನೀಡಿ ಈ ಕೃತಿಯನ್ನು ರಚಿಸಲು ಪ್ರೋತ್ಸಾಹಿಸಿದ ಸಹೋದರಿ ಶ್ರೀಮತಿ ಕೋಡಿಬೆಟ್ಟು ರಾಜಲಕ್ಷ್ಮಿ ಅವರಿಗೂ ನನ್ನ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸಲು ಬಯಸುತ್ತೇನೆ.

ಸ್ವಾತಂತ್ರ್ಯ ಹೋರಾಟಗಾರರ ಕುಟುಂಬಕ್ಕೆ ಸೇರಿದ ನಾನು ಅಭಿಮಾನ ಮತ್ತು ಪ್ರೀತಿಯಿಂದ ಸ್ವಾತಂತ್ರ್ಯ ಹೋರಾಟದ ಕುರಿತು ಈಗಾಗಲೇ 'ಚರಿತ್ರೆಯಲ್ಲಿ ಮರೆತವರ ಕಥೆ' (೧೯೯೫), 'ಸ್ವಾತಂತ್ರ್ಯ ಹೋರಾಟಗಾರರ ಹೊರಳು ನೋಟ' (೨೦೦೯) ಕರಬಂದಿ ಡಿಕ್ಟೇಟರ್ ಬಾಸಗೋಡ ರಾಮ ನಾಯಕ (೨೦೧೬), 'ಸ್ವಾತಂತ್ರ್ಯ ಹೋರಾಟದಲ್ಲಿ ನಾಡವರು' (೨೦೨೧) ಎಂಬ ಕೃತಿಗಳನ್ನು ಬರೆದಿರುವೆನು. 'ಸ್ವಾತಂತ್ರ್ಯ ಹೋರಾಟದಲ್ಲಿ ಅಂಕೋಲೆ' ಇದು ನನ್ನ ಐದನೆಯ ಕೃತಿ. 'ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರು' ಎಂಬ ನನ್ನ ಆರನೆಯ ಕೃತಿ ಅಚ್ಚಿನಲ್ಲಿದೆ ಎಂದು ತಿಳಿಸಲು ಸಂತೋಷವೆನಿಸುತ್ತದೆ.

ಅಂಕೋಲೆಯ ಸ್ವಾತಂತ್ರ್ಯ ಹೋರಾಟದ ರೋಮಾಂಚನದ ಕಥೆಯನ್ನು ಸಹೃದಯ ಓದುಗರು ಪ್ರೀತಿ ಅಭಿಮಾನದಿಂದ ಸ್ವಾಗತಿಸುವರು ಎಂಬ ಹಾರೈಕೆಯೊಂದಿಗೆ,

**– ಶಾಂತಾರಾಮ ನಾಯಕ, ಹಿಚಕಡ**

## ಪರಿವಿಡಿ


| | |
|---|---|
| ಶುಭ ಸಂದೇಶ | ૩ |
| ಶುಭ ಸಂದೇಶ | ೫ |
| ಪ್ರಧಾನ ಸಂಪಾದಕರ ಮಾತು | ೭ |
| ಲೇಖಕರ ಮಾತು | ೧೧ |
| ಸ್ವಾತಂತ್ರ್ಯ ಹೋರಾಟದಲ್ಲಿ ಅಂಕೋಲಾ | ೧೫ |
| **ಅನುಬಂಧ** | |
| ಛಾಯಾಚಿತ್ರಗಳು | ೫೧ |
| ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ | ೫೩ |

# ಸ್ವಾತಂತ್ರ್ಯ ಹೋರಾಟದಲ್ಲಿ ಅಂಕೋಲೆ

'ಅಂಕೋಲೆ ಎಂದರೆ ಭೋರ್ಗರೆವ ಕಡಲ ತೀರದ ಕನ್ನಡ ಕರಾವಳಿಯ ತಾಲ್ಲೂಕು,' ಪಶ್ಚಿಮವಾಹಿನಿ ಗಂಗಾವಳಿ ನದಿ ದಂಡೆಯ ಈ ಪ್ರದೇಶ ವೀರ ಸಂಸ್ಕೃತಿಯ ಚೆಲುವಿನ ಬೀಡು. ಎಂದೆಂದಿಗೂ ಕ್ರಾಂತಿಯ ನೆಲೆವೀಡು. ಸ್ವಾತಂತ್ರ್ಯ ಸಂಗ್ರಾಮದ ಚಂಡೆಮದ್ದಳೆ ಬಾರಿಸಿ ಪ್ರಚಂಡ ಜನಶಕ್ತಿಯನ್ನು ಕೇಂದ್ರೀಕರಿಸಿಕೊಂಡು ವೀರಾವೇಶದಿಂದ ಬ್ರಿಟಿಷ್ ಸಾಮ್ರಾಜ್ಯಶಾಹಿಯ ವಿರುದ್ಧ ಅವಿರತ ಹೋರಾಟ ನಡೆಸಿ ಚರಿತ್ರೆ ನಿರ್ಮಿಸಿದ ಪವಿತ್ರ ಭೂಮಿ, ಸ್ವಾತಂತ್ರ್ಯ ಸಂಗ್ರಾಮದ ಚರಿತ್ರೆಯಲ್ಲಿ ಇದಕ್ಕೆ ವಿಶಿಷ್ಟ ಸ್ಥಾನವಿದೆ.

ಗಂಗಾವಳಿ ನದಿ ತೀರದಲ್ಲಿರುವ ೪೦ ಹಳ್ಳಿಗಳು ಕರಬಂದಿ ಗ್ರಾಮಗಳೆಂದೇ ಪ್ರಸಿದ್ಧವಾಗಿವೆ. ಈ ಹಳ್ಳಿಗಳಲ್ಲಿ ನಾಡವರದೇ ಪ್ರಧಾನ ವಸತಿಯಾಗಿದೆ, ಕರಬಂದಿ ವೀರರೆಂದೇ ನಾಡವರು ಪ್ರಸಿದ್ಧರಾಗಿದ್ದಾರೆ. ಅಂಕೋಲಾ ತಾಲ್ಲೂಕು ಅಸಹಕಾರ ಮತ್ತು ಸ್ವದೇಶಿ ಚಳವಳಿಗಳಲ್ಲಿ 'ಗಾಂಧಿ ತಾಲ್ಲೂಕು' ಎಂದೇ ಹೆಸರಾಗಿತ್ತು. ಉಪ್ಪಿನ ಸತ್ಯಾಗ್ರಹದಲ್ಲಿ ಕರ್ನಾಟಕದ ಸಮರ ಭೂಮಿಯಾಗಿ ಪ್ರಸಿದ್ಧಿ ಪಡೆಯಿತು. ಕರ ನಿರಾಕರಣ ಚಳವಳಿಯಲ್ಲಿ ಅಪೂರ್ವ ತ್ಯಾಗಗೈದು ಭಾರತದ ಎರಡನೇ ಬಾರ್ಡೋಲಿ ಎಂದು ಕೀರ್ತಿ ಪಡೆದಿರುವುದು. ಚಲೇಜಾವ್ ಚಳವಳಿಯಲ್ಲಿ ಸೋಲರಿಯದ ಸಾಹಸದಿಂದ ಪ್ರಾಣದ ಹಂಗು ತೊರೆದು "ಮಾಡು ಇಲ್ಲವೇ ಮಡಿ" ಎಂಬ ನುಡಿಗೆ ಬದ್ಧರಾಗಿ ಹೋರಾಡಿ ಖ್ಯಾತಿ ಪಡೆದ ತಾಲ್ಲೂಕು. ಹೀಗೆ ಅಸಹಕಾರ ಚಳವಳಿಯಿಂದ ಪ್ರಾರಂಭಿಸಿ ಚಲೇಜಾವ್ ಚಳವಳಿಯವರೆಗೆ ಸ್ವಾತಂತ್ರ್ಯ ಸಿಗುವವರೆಗೂ ಅವಿರತವಾಗಿ ಒಂದೂಕಾಲು ಶತಮಾನಕ್ಕಿಂತ ಹೆಚ್ಚು ಕಾಲ ಸ್ವಾತಂತ್ರ್ಯ ಸಂಗ್ರಾಮದ ಉದ್ದಕ್ಕೂ ರೋಮಾಂಚಕ ಹೋರಾಟದ ಇತಿಹಾಸವನ್ನು ನಿರ್ಮಿಸಿದ ಶ್ರೇಯಸ್ಸು ಅಂಕೋಲಾ ತಾಲ್ಲೂಕಿಗೆ ಸಲ್ಲುತ್ತದೆ.

ಅಂಕೋಲಾ ತಾಲ್ಲೂಕಿನಲ್ಲಿ ವಿವಿಧ ಜಾತಿಯ ಪ್ರಮುಖ ಜನಾಂಗಗಳು ಹಲವಿದ್ದರೂ ಸಾಮೂಹಿಕವಾಗಿ ಇಡೀ ಜನಾಂಗವೇ ಸಕ್ರಿಯವಾಗಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದ ಶ್ರೇಯಸ್ಸು ನಾಡವರಿಗೆ ಮಾತ್ರ ಸಲ್ಲುತ್ತದೆ. ಉತ್ತರ ಕನ್ನಡ ಜಿಲ್ಲೆಯ ಸ್ವಾತಂತ್ರ್ಯ ಹೋರಾಟದಲ್ಲಿ ಅಂಕೋಲಾ ತಾಲ್ಲೂಕಿನ ನಾಡವರು ಸಿರ್ಸಿ, ಸಿದ್ದಾಪುರ ತಾಲ್ಲೂಕಿನ ಹವ್ಯಕರು ತಮ್ಮನ್ನು ಇಡಿಯಾಗಿ ತೊಡಗಿಸಿ ಸಮರ್ಪಿಸಿಕೊಂಡಿರುವುದು ಚಾರಿತ್ರಿಕ ಸಂಗತಿಯಾಗಿದೆ.

**ಸ್ವದೇಶಿ ಚಳವಳಿ :**

೧೯೨೧ರಲ್ಲಿ ಸ್ವದೇಶಿ ವಸ್ತ್ರಗಳ ಸ್ವೀಕಾರ ಮತ್ತು ಪರದೇಶಿ ವಸ್ತುಗಳ ಬಹಿಷ್ಕಾರ ಚಳವಳಿಯು ಪ್ರಚಾರಕ್ಕೆ ಬಂದ ಕೀರ್ತನ ಕೇಸರಿ ಜಯರಾಮಾಚಾರ್ಯರಿಂದ ವಿಶೇಷವಾಗಿ ನಾಡವರ ಹಳ್ಳಿಗಳಲ್ಲಿ ಸ್ವಾತಂತ್ರ್ಯ ಹಾಗೂ ರಾಷ್ಟ್ರೀಯ ಭಾವನೆಯ ಜಾಗೃತಿ ಮೊದಲಾಯಿತು. ಹಳ್ಳಿಗಳಲ್ಲಿ ಬಾಸಗೋಡ ರಾಮನಾಯಕ, ವಂದಿಗೆ ಹಮ್ಮಣ್ಣ ನಾಯಕ, ಶೆಟಗೇರಿ ಜೋಗಿನಾಯಕ, ಬೋಳೆ ಬೊಮ್ಮಯ್ಯ ನಾಯಕ ಮೊದಲಾದ ಸ್ಥಳೀಯ ಮುಂದಾಳುಗಳು ಜಯರಾಮಾಚಾರ್ಯರ ಕೀರ್ತನೆಯಿಂದ ಪ್ರಭಾವಿತರಾಗಿ ಖಾದಿಯನ್ನೇ ತೊಡುತ್ತ ಬಂದರು. ವಂದಿಗೆ ಹಮ್ಮಣ್ಣ ನಾಯಕರಂತೂ ತಮ್ಮ ನಡೆ–ನುಡಿಗಳಿಂದ ಚೌಕದಳ್ಳಿ ಗಾಂಧಿಯೆಂದೇ ಪ್ರಸಿದ್ಧರಾದರು. ಅಸಹಕಾರ ಚಳುವಳಿಯ ಕಾರ್ಯಕ್ರಮಗಳನ್ನು ಹಳ್ಳಿಗಳಲ್ಲಿ ಆಚರಣೆಗೆ ತರಲಾಯಿತು. ಶ್ರೀಮತಿ ಯಶೋದಾ ಶಾಮರಾವ್ ಶೇಣ್ವಿಯವರ ಧುರೀಣತ್ವದಲ್ಲಿ ಪಟ್ಟಣದಲ್ಲಿ ಚಳುವಳಿ ತುಂಬಾ ಯಶಸ್ವಿಯಾಯಿತು.

ರಂಗನಾಥ ದಿವಾಕರ, ಕರಮರಕರ, ಗಂಗಾಧರರಾವ್ ದೇಶಪಾಂಡೆ, ಕೌಜಲಗಿ ಹನುಮಂತರಾಯ, ಮುದವೀಡು ಕೃಷ್ಣರಾಯ, ಶ್ರೀಮತಿ ಕೃಷ್ಣಾಬಾಯಿ ಪಂಜೀಕರ ಮೊದಲಾದವರು ಹಳ್ಳಿಗಳಲ್ಲಿ ಸ್ಥಳೀಯ ನಾಯಕರೊಂದಿಗೆ ಸಂಚರಿಸಿ ಜಾಗೃತಿ ಉಂಟುಮಾಡಿದರು. ನಾಡವರಂತೂ ಗಾಂಧಿ ಭಕ್ತರಾಗಿಬಿಟ್ಟರು. ಈ ನಾಯಕರ ಪ್ರೋತ್ಸಾಹ, ಮಾರ್ಗದರ್ಶನ ಜೊತೆಗೆ ಸ್ಥಳೀಯ ನಾಯಕರ ಸಹಕಾರ ಹುಮ್ಮಸ್ಸಿನ ಫಲವಾಗಿ ಚಳವಳಿಯ ಕಾವೇರಿ ಎಲ್ಲೆಲ್ಲೂ ಉತ್ತೇಜಕವಾದ



ವಾತಾವರಣ ಉಂಟಾಗಿ ಅಂಕೋಲೆಯ ಮುಂದಿನ ಹೆಜ್ಜೆಯಾಗಿ ಉಪ್ಪಿನ ಸತ್ಯಾಗ್ರಹ ಸಜ್ಜಾಯಿತು.

**ಕಾಯಿದೆ ಭಂಗ ಚಳುವಳಿ ಉಪ್ಪಿನ ಸತ್ಯಾಗ್ರಹ :**

೧೯೩೦ರ ಏಪ್ರಿಲ್ ೧೩ ರಂದು ಅಂಕೋಲೆಯಲ್ಲಿ ಉಪ್ಪಿನ ಕಾಯಿದೆ ಭಂಗ ಮಾಡುವುದೆಂದು ಸತ್ಯಾಗ್ರಹ ಮಂಡಲ ನಿರ್ಧರಿಸಿತ್ತು. "ಕರೆಯುವುದೋ ನಮ್ಮನ್ನು ರಣಭೇರಿ ಕರೆಯುವುದು, ಗಾಂಧಿ ಮಹಾತ್ಮನ ಭೇರಿ" ಎಂದು ರಾಷ್ಟ್ರಗೀತೆಯೊಂದಿಗೆ ಹಾಡುತ್ತ ಅಂಕೋಲಾ ಪಟ್ಟಣದ ಮಧ್ಯಭಾಗದಿಂದ ಪ್ರಭಾತ್‌ಪೇರಿ ಹೊರಟಿತು. ಹುಬ್ಬಳ್ಳಿ, ದಾವಣಗೆರೆ, ಉಡುಪಿ, ಬೆಳಗಾವಿ ಕಡೆಗಳಿಂದ ಹಾಗೂ ಜಿಲ್ಲೆಯ ಎಲ್ಲ ತಾಲೂಕುಗಳಿಂದ ಸ್ವಯಂಸೇವಕ ಪಥಕಗಳು ಬಂದಿದ್ದವು. ಹಳ್ಳಿಗಳಿಂದ ಜನರು ತಂಡೋಪತಂಡವಾಗಿ ಆಗಮಿಸಿದ್ದರು. ಅಂಕೋಲಾ ನಗರವು ತಳಿರು ತೋರಣಗಳಿಂದ ಸಿಂಗರಿಸಲ್ಪಟ್ಟಿತು. ಡಾ. ಹರ್ಡೀಕರರು ನಿಶ್ಚಿತ ಸಮಯಕ್ಕೆ ಬರಲು ಸಾಧ್ಯವಾಗದೇ ಇದ್ದುದರಿಂದ ಶ್ರೀ ಎಂ.ಪಿ. ನಾಡಕರ್ಣಿಯವರ ಮುಂದಾಳುತನದಲ್ಲಿ ಮಧ್ಯಾಹ್ನ ೧:೦೦ ಗಂಟೆಗೆ ಒಂದೂವರೆ ಮೈಲುದ್ದದ ಮೆರವಣಿಗೆ 'ಮಹಾತ್ಮ ಗಾಂಧೀಜಿ ಕಿ ಜೈ' ಪ್ರಚಂಡ ಜಯಘೋಷದೊಂದಿಗೆ ಹೊರಟು ಪೂಜಗೇರಿಯ ವಿಶಾಲ ಬಯಲಿನಲ್ಲಿ ಸೇರಿತು. ಈ ಪ್ರಚಂಡ ಮೆರವಣಿಗೆಗೆ ಕೂಡಿದ ಜನರನ್ನು ಕಂಡು ಕೇಳಿ ತಿಳಿದ ಸರಕಾರ ಭಯಗೊಂಂಡಿತು. ಸುಮಾರು ೨೫ ಸಾವಿರದಷ್ಟು ಜನರು ಭಾಗವಹಿಸಿದರೆಂಬ ಅಂದಾಜಿದೆ. ಆ ಬಯಲಿನಿಂದ ಅರ್ಧ ಮೈಲು ದೂರವಿರುವ ಸಮುದ್ರಕ್ಕೆ ಹೋಗಿ ಸ್ವಯಂ ಸೇವಕರು ಉಪ್ಪು ಮಣ್ಣು, ಉಪ್ಪು ನೀರು ತಂದಮೇಲೆ ಜಯಘೋಷದೊಂದಿಗೆ ಮೆರವಣಿಗೆ ಹಿಂತಿರುಗಿ ಅಂಕೋಲಾ ತಾಲೂಕು ಕಚೇರಿಯ ಎದುರಿಗೆ ಬಂದೊಡನೆ ಅಲ್ಲೇ ವರ್ತುಲ ಮಾಡಿ, ಮಧ್ಯೆ ಬಲೆ ಮಾಡಿ ಉಪ್ಪುನೀರು ಮಡಕೆಗಳನ್ನಿಟ್ಟು ಬೆಂಕಿ ಹೊತ್ತಿಸಿ ಉಪ್ಪು ತಯಾರಿಸಿದರು. ದಳಪತಿ ನಾಡಕರ್ಣಿಯವರು ತಯಾರಿಸಿದ ಉಪ್ಪನ್ನು ಜನರಿಗೆ ತೋರಿಸಿ "ಸರ್ಕಾರಕ್ಕೆ ಕರ ಕೊಡದೆ ತಯಾರಿಸಿದ ಸ್ವತಂತ್ರ ಉಪ್ಪನ್ನು ಕೊಂಡು ಉಪ್ಪಿನ ಕಾಯದೆ ಭಂಗ ಮಾಡಿ ಮಹಾತ್ಮರಲ್ಲಿರುವ ನಿಷ್ಠೆಯನ್ನು ವ್ಯಕ್ತಮಾಡಿರಿ" ಎಂದು ಹೇಳಿ ಉಪ್ಪನ್ನು ಲಿಲಾವಿಗಿಟ್ಟರು. ಉಪ್ಪಿನ ಮೊದಲನೇ

ಪೊಟ್ಟಣವನ್ನು ಹಿಚಕಡ ಮೂಲದ ಅಂಕೋಲೆಯ ದೇವು ಹೊನ್ನಪ್ಪ ನಾಯ್ಕರು ಮೂವತ್ತು ರೂ.ಗಳಿಗೆ ಕೊಂಡರು. ಎರಡನೇ ಪೊಟ್ಟಣವನ್ನು ಕಾರವಾರದ ಭುಜಲೆಯವರು ಏಳು ರೂಪಾಯಿಗೆ ಕೊಂಡರೆ, ಮೂರನೇ ಪೊಟ್ಟಣವನ್ನು ದಾವಣಗೆರೆಯ ಹರಿಹರ ಶೆಟ್ಟರು ಕೊಂಡರು.

ಸುತ್ತಮುತ್ತಲಿನ ಹಳ್ಳಿಯ ಜನರು ಮುಗಿಲು ಮುಟ್ಟುವಂತೆ ಜಯಘೋಷ ಮಾಡುತ್ತ ಸರಕಾರವನ್ನು ತೃಣಕ್ಕೆ ಸಮಾನ ಎಂದು ಬಗೆದು ಸಾಗಿದ ಮೆರವಣಿಗೆಯನ್ನು ನೋಡಿ ದಿಗಿಲುಗೊಂಡು ಅಲ್ಲಿಯೇ ತನ್ನ ಪೊಲೀಸ್ ಪಡೆಯೊಂದಿಗೆ ನಿಂತಿದ್ದ ಆಂಗ್ಲ ಡಿ.ಎಸ್.ಪಿ. "ಈ ಹಳ್ಳಿಗರ ಉತ್ಸಾಹಪೂರಿತ ಶಕ್ತಿಯನ್ನು ಹತ್ತಿಕ್ಕುವುದು ಜಗತ್ತಿನ ಯಾವ ಶಕ್ತಿಗೆ ತಾನೆ ಸಾಧ್ಯ" ಎಂದು ಉದ್ಗಾರ ತೆಗೆದುದು ಇತಿಹಾಸ ಪ್ರಸಿದ್ಧ ದಾಖಲೆಯಾಗಿದೆ.

ಪೊಲೀಸರು ಧುರೀಣರನ್ನು ಕಾರ್ಯಕರ್ತರನ್ನು ಬಂಧಿಸುವ ಧೋರಣೆ ಹೊಂದಿ ಶ್ರೀ ಶಾಮರಾವ್ ಶೇಣ್ವಿಯವರನ್ನು ಬಂಧಿಸಿದರು. ಅವರನ್ನು ಅವರ ತಾಯಿ ಆಶೀರ್ವದಿಸಿ, ಪತ್ನಿ ಆರತಿ ಎತ್ತಿ ಹಾಗೂ ಜನರು ಸಂಭ್ರಮದಿಂದ ತಾಲೂಕು ಕಚೇರಿಗೆ ತಲುಪಿಸಿದರು. ಧುರೀಣರನ್ನು ಬಂಧಿಸಿದ್ದು ಯಜ್ಞಕುಂಡದಲ್ಲಿ ತುಪ್ಪವನ್ನು ಹಾಕಿದಂತಾಯಿತು. ಅಂಕೋಲಾ ತಾಲೂಕಿನ ನಾಡವರು ಪೊಲೀಸರ ಬಲವೆಷ್ಟು ನೋಡಿಯೇ ಬಿಡುವಾ ಎಂದು ನಿರ್ಧರಿಸಿದರು. ಏಪ್ರಿಲ್ ೨೫ ರಂದು ನಾಡವರ ಹಳ್ಳಿಗಳಿಂದ ಮತ್ತು ಹಾಲಕ್ಕಿ ಗೌಡರ ಹಳ್ಳಿಯಿಂದ ನೂರಾರು ಸಂಖ್ಯೆಯಲ್ಲಿ ಸಭೆಗೆ ಬಂದರು. ಸ್ತ್ರೀಯರು ಎಳೆಯ ಮಕ್ಕಳನ್ನು ಎತ್ತಿಕೊಂಡು ಬಿಸಿಲಿನಲ್ಲಿ ನಡೆದುಕೊಂಡು ಬಂದಿದ್ದರು. ಶಾಮರಾವ್ ಶೇಣ್ವಿಯವರ ತಂಗಿ ಶ್ರೀಮತಿ ಸೀತಾಬಾಯಿ ಮತ್ತು ಆನಂದಿಬಾಯಿ ಹನುಮಟ್ಟೇಕರರು ಆವೇಶ ಪೂರ್ಣವಾಗಿ ಭಾಷಣ ಮಾಡಿದರು. ಸಾವಿರಾರು ಜನರು ಸೇರಿದ ಉಪ್ಪಿನ ಸಂತೆ ಅವಿಸ್ಮರಣೀಯವಾಗಿತ್ತು. ಸ್ವಯಂಸೇವಕರು ಸಂತೆಯು ಒಳ್ಳೆಯ ಓರಣದಿಂದ ನಡೆಯುವಂತೆ ನೋಡಿಕೊಳ್ಳುತ್ತಿದ್ದರು. ಸಾವಿರಾರು ಜನರು ಸೇರಿದ ಆ ಸಂತೆ ಅವಿಸ್ಮರಣೀಯವಾಗಿತ್ತು. ಎಲ್ಲಿ ನೋಡಿದರೂ ಜಯ ಜಯಕಾರ, ಎಲ್ಲರ ತಲೆಯ ಮೇಲೆ ಗಾಂಧಿ ಟೊಪ್ಪಿಗೆ, ಸೆರೆಮನೆಗೆ ಹೋಗಲು ಸಿದ್ಧವಾಗಿಯೇ ಬಂದಿದ್ದರು. ವಾರಕ್ಕೊಮ್ಮೆ ಉಪ್ಪಿನ ಸಂತೆ ಕೂಡಲಿಕ್ಕೆ ಮೊದಲಾಯಿತು, ಮೊದಲನೇ ಸಂತೆಯಲ್ಲಿ ಸುಮಾರು ೨೦೦ ಜನರು ಉಪ್ಪನ್ನು



ಮಾರಾಟಕ್ಕೆ ತಂದಿದ್ದರು. ಈ ಸಂತೆಯಲ್ಲಿ ನಾಡವರ ಸಮಾಜದ ಜನರೇ ಹಿರಿದಾದ ಭಾಗವನ್ನು ವಹಿಸಿದ್ದರು. ಉತ್ಸಾಹ ಹುರುಪು ತುಂಬಿ ತುಳುಕಾಡುತ್ತಿತ್ತು. ಈ ನಾಡವರ ಮುಂದಾಳುಗಳನ್ನು ಸೆರೆ ಹಿಡಿದರೆ ಉಳಿದವರು ಅಂಜುವರೆಂದು ಸರಕಾರ ಭಾವಿಸಿ ಸಂತೆಯಲ್ಲಿ ಉಪ್ಪು ಮಾರುತ್ತಿದ್ದ ನಾಡವರ ಧುರೀಣರಾದ ಹಮ್ಮಣ್ಣ ಗೋವಿಂದನಾಯಕ ವಂದಿಗೆ, ಬೊಮ್ಮಯ್ಯ ರಾಕು ನಾಯಕ ಬಾಸಗೋಡ, ಬೀರಣ್ಣ ಬೊಮ್ಮಯ್ಯ ನಾಯಕ ಕಣಗಿಲ, ದೇವಣ್ಣ ಹೊನ್ನಪ್ಪ ನಾಯಕ ವಂದಿಗೆ ಈ ನಾಲ್ವರನ್ನು ಸೆರೆ ಹಿಡಿದರು. ಆದರೆ ಈ ಬಂಧನದ ದಬ್ಬಾಳಿಕೆಯಿಂದ ಸತ್ಯಾಗ್ರಹಕ್ಕೆ ಇನ್ನಷ್ಟು ಕಳೆಯೇರಿತೇ ಹೊರತು ಜನರು ಹಿಂದೆ ಸರಿಯಲಿಲ್ಲ. ನಾಡವರು ವಿಕಾರವಶರಾಗದೆ ಶಾಂತರೀತಿಯಿಂದ ಉತ್ಸಾಹದಿಂದ ಉಪ್ಪು ಮಾರುವುದನ್ನು ಮುಂದುವರಿಸಿದರು. ಸಂಜೆಗೆ ತಾಲೂಕು ಕಚೇರಿಯ ಮುಂದಿನ ಬಯಲಿನಲ್ಲಿ ಸಭೆ ಸೇರಿದರು. ಆ ಸಭೆಯಲ್ಲಿ ಶೆಟಗೇರಿ ಜೋಗಿ ನಾಯಕರು ಭಾಷಣ ಮಾಡುತ್ತಿರುವಾಗ ಫೌಜುದಾರರು ಅವರನ್ನು ಬಂಧಿಸಿದರು. ಜಯಘೋಷದೊಂದಿಗೆ ಅವರನ್ನು ಬೀಳ್ಕೊಟ್ಟು ಶಾಂತರೀತಿಯಿಂದ ಸಭೆ ಮುಂದುವರೆಯಿತು. ಪ್ರತಿ ದಿವಸವು ಉಪ್ಪು ನೀರು ತಂದು ಉಪ್ಪು ಮಾಡಿ ಮಾರುತ್ತಲೇ ಇದ್ದರು. ಅಷ್ಟರೊಳಗೆ ೪೧ ಜನರು ಸೆರೆಮನೆ ಸೇರಿದ್ದರು. ಈ ಬಗೆಯಾಗಿ ಮಳೆಗಾಲ ಪ್ರಾರಂಭವಾಗುವವರೆಗೂ ಉಪ್ಪಿನ ಸತ್ಯಾಗ್ರಹ ನಡೆಯಿತು. ನಾಡವರು ಮಾತ್ರ ಇದೊಂದು ಪವಿತ್ರ ಯಜ್ಞಕಾರ್ಯವೆಂದು ತಿಳಿದು ಭಾವಪರವಶರಾಗಿ ಹಗಲಿರುಳೆನ್ನದೇ ಉದ್ಯೋಗ ವ್ಯವಸಾಯಗಳನ್ನು ಅಲಕ್ಷಿಸಿ ಚಳುವಳಿಯಲ್ಲಿ ಧುಮುಕಿ ಹೋರಾಡಿದರು. ನಾಡವರ ಜೊತೆ ಹಾಲಕ್ಕಿ ಗೌಡರು ಕೂಡ ಭಾಗವಹಿಸಿದ್ದರು. ಇಡೀ ನಾಡವರ ಸಮಾಜ ಗಾಂಧಿಮಯವಾಗಿ ಹೋಗಿತ್ತು. ನಾಡವರು ಉಪ್ಪಿನ ಕಾಯಿದೆ ಭಂಗ ಚಳುವಳಿಯಲ್ಲಿ ಉತ್ಸಾಹದಿಂದ ಹುಮ್ಮಸ್ಸಿನಿಂದ ಭಾಗವಹಿಸಿದ್ದನ್ನು ಕಂಡು ಹೆಮ್ಮೆಯ ಕವಿ, ನೇತಾರರಾದ ಶ್ರೀ ದಿನಕರ ದೇಸಾಯಿಯವರು ನಾಡವರ ಹೋರಾಟದ ಕುರಿತು ಬರೆದ ಕವನ ನಾಡವರಲ್ಲಾದ ಜಾಗೃತಿಯನ್ನು, ಹೋರಾಟದ ಕೆಚ್ಚನ್ನು, ದೇಶಾಭಿಮಾನವನ್ನು ಪ್ರಕಟಪಡಿಸುತ್ತದೆ.

ನಾಡವರೇ ನಿಜ ನಾಡಿಗರು
ನೋಡು ಕಾಳಗವ ಹೂಡಿಹರು

ಸ್ವಾತಂತ್ರ್ಯದ ಸುಖದೂಟವನುಂಡು
ವಿಜಯನಗರದಲಿ ಕಾದಿದ ದಂಡು
ನಾಡವರಂದಿನ ದಾಸ್ಯವ ಕಂಡು
ಉಪ್ಪು ಮಾಡುವರು ಮುಂದಕೆ ಬಂದು
ನಾಡವರೇ ನಿಜ ನಾಡಿಗರು
ಹಿಂದಿನ ಹುರುಪೇ ಇಂದಿಗೆ ಮೂಡಿ
ನಾಡವರೆಲ್ಲರೂ ಒಂದೆಡೆ ಕೂಡಿ
ಗಾಂಧಿ ಮಹಾತ್ಮನ ಕೊಂಬನು ಕೇಳಿ
ನೆಗೆದು ಕಾದುವರು ಧೈರ್ಯವ ತಾಳಿ
ನಾಡವರೆ ನಿಜ ನಾಡಿಗರು!
ಕಲ್ಲಿನ ದೇಹವು ಆರಡಿ ಉದ್ದ
ಸೋಲದು ಅವರಿದ್ದರೆ ಈ ಯುದ್ಧ
ಕನ್ನಡ ನಾಡಿನ ಶೀಖರು ಇವರು
ದೇಶಕೋಸುಗ ಕಾದುತಲಿಹರು
ನಾಡವರೇ ನಿಜ ನಾಡಿಗರು!
ನೋಡು ಕಾಳಗವ ಹೂಡಿಹರು
ನಾಡಿನ ಧೀರರು ಸೆರೆಮನೆಯಲ್ಲಿ
ಸ್ವಾತಂತ್ರ್ಯದ ಸುಖ ತೊಟ್ಟಿಲಿನಲ್ಲಿ
ನಾಡವರಲಿ ಮೂಡಿರುವುದು ಸ್ವರಾಜ್ಯ
ಇದುವೇ ಭಾರತ ಭೂಮಿಯ ಭಾಗ್ಯ
ನಾಡವರೇ ನಿಜ ನಾಡಿಗರು!
ನೋಡು ಕಾಳಗವ ಹೂಡಿಹರು

ನಾಡವರ ದೇಶಾಭಿಮಾನ ಹೋರಾಟದ ಕೆಚ್ಚಿಗೆ ಈ ಕವನ ಸಾಕ್ಷಿಯಾಗಿದೆ.

ಶಾಲೆಯ ವಿದ್ಯಾರ್ಥಿಗಳು ಸಹ ಪ್ರಭಾತ್‌ಫೇರಿ ತೆಗೆಯುವುದು, ಉಪ್ಪನ್ನು ಮನೆ ಮನೆಗೆ ಹೋಗಿ ಮಾರಾಟ ಮಾಡುವುದು ಮೊದಲಾದ ಕಾರ್ಯವನ್ನು ಮಾಡಿದರು. ಅಂಕೋಲೆಯ ಎಡ್ವರ್ಡ್ ಹೈಸ್ಕೂಲಿನ (ಈಗ ಜೈಹಿಂದ್



ಹೈಸ್ಕೂಲ್ ಆಗಿದೆ) ವಿದ್ಯಾರ್ಥಿಗಳು ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರು. ಕಮಲಾಕರ ನಾರ್ವೇಕರ ಮತ್ತು ವೆಂಕಟರಮಣ ಕಿಣಿ ಇವರು ವಿದ್ಯಾರ್ಥಿಗಳ ಧುರೀಣರಾಗಿ ಮಾಡಿದ ಕಾರ್ಯವು ಸತ್ಯಾಗ್ರಹ ಶಿಬಿರದ ಮೆಚ್ಚುಗೆಯನ್ನು ಪಡೆದಿತ್ತು.

ಜನಸಾಮಾನ್ಯರ ಉತ್ಸಾಹ ಹುರುಪು ಹುಮ್ಮಸ್ಸುಗಳಿಂದ, ದೇಶಾಭಿಮಾನ ದಿಂದ ಪ್ರೇರಿತವಾದ ಉಪ್ಪಿನಕಾಯಿದೆಯು ನಾಮಾವಶೇಷವಾಯಿತು. ಜನರಲ್ಲಿ ಅದ್ಭುತ ಜಾಗೃತಿ ಉಂಟಾಯಿತು. ಅಂಕೋಲೆಯ ಉಪ್ಪಿನ ಸತ್ಯಾಗ್ರಹ ರಾಷ್ಟ್ರದ ಗಮನ ಸೆಳೆದು ಸ್ವಾತಂತ್ರ್ಯ ಸಂಗ್ರಾಮದ ಚರಿತ್ರೆಯ ಪುಟದಲ್ಲಿ ಸೇರಿ ಅಂಕೋಲೆ ಮಹತ್ವದ ಸ್ಥಾನವನ್ನು ಪಡೆಯುವಂತಾಯಿತು.

## ಜಂಗಲ್ ಸತ್ಯಾಗ್ರಹ :

ಅಂಕೋಲೆಯಲ್ಲಿ ಆಗಸ್ಟ್ ೬, ೧೯೩೦ರಂದು ಅರಣ್ಯ ಸತ್ಯಾಗ್ರಹ ಪ್ರಾರಂಭವಾಯಿತು. ಅರಣ್ಯ ಸತ್ಯಾಗ್ರಹದಲ್ಲಿ ನಾಡವರು ಮತ್ತು ಹಾಲಕ್ಕಿ ಗೌಡರು ಉತ್ಸಾಹದಿಂದ ಭಾಗವಹಿಸಿದರು. ಪ್ರತಿ ಸೋಮವಾರ ಜಂಗಲ್ ಕಾಯಿದೆ ಭಂಗ ಮಾಡಬೇಕೆಂದು ಕೊಟ್ಟ ಆದೇಶದಂತೆ ಆಗಸ್ಟ್ ೨೫ರಂದು ಅರಣ್ಯಕ್ಕೆ ಮೆರವಣಿಗೆಯಲ್ಲಿ ಸಾಗಿದರು. ಅರಣ್ಯ ಕಾಯ್ದೆ ಭಂಗ ನಡೆಯದಂತೆ ೧೦೦ ಜನ ಪೋಲಿಸರೊಂದಿಗೆ ಡಿ.ಎಸ್.ಪಿ. ಸಾಹೇಬರು ಮೆರವಣಿಗೆಯನ್ನು ತಡೆದರು. ಕೊಡಲಿ, ಕತ್ತಿಗಳನ್ನು ಕಸಿದುಕೊಂಡರು. ೫೦ ಜನರನ್ನು ಬಂಧಿಸಿದರು. ಇದರಿಂದ ಜನರು ರೊಚ್ಚಿಗೇಳಬಹುದೆಂದು ಭಾವಿಸಿದ್ದರು, ಆದರೆ ಜನರು ಶಾಂತ ರೀತಿಯಿಂದ ರಸ್ತೆಯ ಮೇಲೆ ನಿಂತ ಸ್ಥಳದಲ್ಲಿಯೇ ಕೂತರು. ಎರಡು ನಿಮಿಷಗಳಲ್ಲಿ ಹೊರಟು ಹೋಗಬೇಕೆಂದು ತಾಕೀತು ಮಾಡಿದರು, ಗರ್ಜಿಸಿದರು. ಜನರು ರಾಷ್ಟ್ರೀಯ ಗೀತೆಗಳನ್ನು ಹಾಡುತ್ತಾ ಎರಡು ತಾಸುಗಳಾದರೂ ಕದಲಲಿಲ್ಲ. ಈ ಸುದ್ದಿ ಹಳ್ಳಿಹಳ್ಳಿಗೂ ತಲುಪಿ ನಾಡವರ ಹಾಗೂ ಹಾಲಕ್ಕಿ ಗೌಡರ ಹಳ್ಳಿಗಳಿಂದ ಜಯಘೋಷ ಮಾಡುತ್ತಾ ಕುಳಿತ ಜನರ ಹತ್ತಿರ ಬಂದರು. ಸಾವಿರಾರು ಜನರು ಕೂಡಿದರು. ಪೋಲೀಸರಿಗೆ ಏನು ಮಾಡಬೇಕೆಂದು ತಿಳಿಯದೆ ರಾತ್ರಿ ೮ ಗಂಟೆಯಾದರೂ ಜನರು ಸ್ಥಳದಿಂದ ಕದಲಲಿಲ್ಲ. ಪೋಲೀಸ್ ಅಧಿಕಾರಿ ಎಲ್ಲರನ್ನೂ ಕೈದು ಮಾಡಲಾಗಿದೆ ಎಂದು ಘೋಷಿಸಿ ತಾಲ್ಲೂಕು ಕಚೇರಿಗೆ

ಕರೆತಂದು, ಕೇವಲ ಆರು ಜನರನ್ನು ಮಾತ್ರ ಲಾಕಪ್ಪಿಗೆ ಕಳುಹಿಸಿ ಉಳಿದವರನ್ನು ಬಿಟ್ಟುಕೊಟ್ಟರು. ಆ ರಾತ್ರಿ ಸಮಯದಲ್ಲಿಯೇ ಜನರು ಜಯಘೋಷ ಮಾಡುತ್ತಾ ಜಂಗಲ್ಲಿಗೆ ಹೋಗಿ ಕಡಿದ ಕಟ್ಟಿಗೆಯನ್ನು ಮೆರವಣಿಗೆಯಲ್ಲಿ ತಂದು ಗಾಂಧಿ ಮೈದಾನದಲ್ಲಿ ಸಭೆ ಸೇರಿ ಕಟ್ಟಿಗೆ ಲಿಲಾವು ಮಾಡಿ ಜಂಗಲ್ ಸತ್ಯಾಗ್ರಹ ಭಂಗಗೊಳಿಸಿದ ಆನಂದದಲ್ಲಿ ಮನೆಗೆ ಮರಳಿ ಹೋದರು.

**ಕರ ನಿರಾಕರಣೆ ಚಳವಳಿ :**

"ಉಪ್ಪಿನ ಸತ್ಯಾಗ್ರಹದಲ್ಲಿ ಅಸಾಧಾರಣ ಯಶಸ್ಸು ಪಡೆದ ಅಂಕೋಲೆ ತಾಲ್ಲೂಕಿನಲ್ಲಿ ಆದ ಜನಜಾಗೃತಿ, ಅಲ್ಲಿಯ ಶೂರ ನಾಡವರ ಒಕ್ಕಟ್ಟು ಇವುಗಳಿಂದ ಕರ ನಿರಾಕರಣೆಯ ಸತ್ಯಾಗ್ರಹ ಕೈಗೊಳ್ಳಲು ಅಂಕೋಲೆಯ ಜನರೇ ಸಮರ್ಥರು ಎಂಬ ಸಾಮಾನ್ಯ ಭಾವನೆ ಕರ್ನಾಟಕ ಸತ್ಯಾಗ್ರಹ ಮಂಡಲದ ಸದಸ್ಯರಲ್ಲಿ ಹುಟ್ಟಿತ್ತು". (ಕರ ನಿರಾಕರಣೆಯ ವೀರ ಕಥೆ – ದಿವಾಕರ) ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲ್ಲೂಕಿನಲ್ಲಿ ಕರಬಂದಿಗೆ ಕಾರಣರು ಮತ್ತು ಮುಖ್ಯ ಪ್ರಾಣರು ಈ ನಾಡವರೇ ಆಗಿರುವರು.

ಸ್ವಂತ ಜಮೀನು ಇರುವವರು ಮಾತ್ರ ಈ ಚಳವಳಿಯಲ್ಲಿ ಭಾಗವಹಿಸಬಹುದಿತ್ತು. ಹಳ್ಳಿಗಳಲ್ಲಿ ನಾಡವರಿಗೆ ಮಾತ್ರ ಜಮೀನಿತ್ತು. ನಾಡವರ ಹಳ್ಳಿಗಳನ್ನು ಸುತ್ತುವರಿದ ಹಾಲಕ್ಕಿಗೌಡರಿಗೆ ರಾಮದಾಸರ ಕುಟುಂಬವನ್ನು ಹೊರತುಪಡಿಸಿ ಹೆಚ್ಚಿನವರಿಗೆ ಸ್ವಂತ ಜಮೀನು ಇರಲಿಲ್ಲ.

ನಾಡವರ ಮುಖಂಡರು ಕರನಿರಾಕರಣೆಯ ಆಂದೋಲನ ಮಾಡಲು ನಿರ್ಧರಿಸಿದರು. ಅದರಂತೆ ತಾಲೂಕಿನಲ್ಲಿ ಕರನಿರಾಕರಣೆ ಚಳವಳಿಯ ಮೊದಲ ಸಭೆ ನಾಡವರ ಹಳ್ಳಿಯಾದ ಸೂರ್ವೆಯ ಕಲಶ ದೇವಸ್ಥಾನದಲ್ಲಿ ಸೇರಿತ್ತು. ನಾಡವರ ಹಳ್ಳಿಗಳಿಂದ ಬಾಸಗೋಡ ರಾಮಾನಾಯಕ, ಬೋಳೆ ಬೊಮ್ಮಯ್ಯ ನಾಯಕ, ಬೋಳೆ ದೇವಣ್ಣನಾಯಕ, ಶೆಟಗೇರಿ ಜೋಗಿನಾಯಕ ಮೊದಲಾದವರು ಆಗಮಿಸಿದ್ದರು. ದಿವಾಕರರು ಮತ್ತು ಕರಮರಕರರು ಕರಬಂದಿ ಚಳವಳಿ ಕುರಿತು ತಿಳಿಸಿ ಹೇಳಿದರು.

ಕರಬಂದಿಯಂತಹ ಉಗ್ರತರವಾದ ಕಾಯದೆ ಭಂಗ ಮಾಡಬೇಕಾದರೆ ಜನತೆಯು ಚೆನ್ನಾಗಿ ಸಿದ್ಧತೆ ಮಾಡಿಕೊಳ್ಳಬೇಕಾಗುವುದೆಂದೂ,



ಮಹಾತ್ಮಾಜೀಯವರ ಅಹಿಂಸಾ ತತ್ವವನ್ನು ಪೂರ್ಣವಾಗಿ ಪಾಲಿಸಬೇಕಾಗುವು ದೆಂದು ತಿಳಿಸಿದರು. ಬಾಸಗೋಡ ರಾಮ ನಾಯಕರು ಅಳಿವುದು ಕಾಯ ಉಳಿವುದು ಕೀರ್ತಿ ಎಂದು ಆವೇಶದಿಂದ ಭಾಷಣ ಮಾಡಿ ಕರನಿರಾಕರಣೆಯ ನಿರ್ಣಯ ಸ್ವೀಕರಿಸುವುದು ನಮ್ಮ ಧರ್ಮ ಎಂದು ಹೇಳಿದರು. ಶೆಟಗೇರಿ ಜೋಗಿ ನಾಯಕರು 'ಈ ಧರ್ಮಯುದ್ಧದಲ್ಲಿ ಹೋರಾಡುವುದು ನಮ್ಮ ಧರ್ಮ' ನಾಡವರ ಕ್ಷಾತ್ರ ವೃತ್ತಿಗೆ ಭೂಷಣ, ಇದು ನಮ್ಮ ಕರ್ತವ್ಯ ಎಂದು ಹುರಿದುಂಬಿಸಿದರು. ದಿವಾಕರರು ಸಭೆಯಲ್ಲಿದ್ದವರ ವೈಯಕ್ತಿಕ ಅಭಿಪ್ರಾಯವನ್ನು ತಿಳಿಸಲು ವಿನಂತಿಸಿದಾಗ ಮೊದಲು ಸೂರ್ವೆಯ ಬೊಮ್ಮಯ್ಯ ಪೊಕ್ಕ ನಾಯಕರು "ಯಾರು ಮಾಡಲಿ ಬಿಡಲಿ ನಾನು ಮಾತ್ರ ಮಹಾತ್ಮರನ್ನು ಸ್ಮರಿಸಿ ಕರನಿರಾಕರಣೆ ಮಾಡಿಯೇ ತೀರುವೆನು" ಎಂದು ಮಹಾತ್ಮರ ಬಗೆಗೆ ಉಕ್ಕಿ ಬರುವ ಭಕ್ತಿಯಿಂದ ಧೀರ ಪ್ರತಿಜ್ಞೆಯನ್ನು ಮೊದಲು ಗೈದ ಕೀರ್ತಿ ಅವರಿಗೆ ಸಲ್ಲುತ್ತದೆ. ಅವರ ಪಕ್ಕದಲ್ಲೇ ಕುಳಿತ ಬೋಳೆ ದೇವಣ್ಣ ನಾಯಕರು ಸ್ಫೂರ್ತಿಗೊಂಡು ತಟ್ಟನೆ ಎದ್ದು ನಿಂತು "ಭೂಮಿ ಹೋದರೆ ಹೋಗಲಿ, ಬೇಕಾದ ಆಪತ್ತು ಬರಲಿ, ನಮ್ಮ ಊರಲ್ಲಿ ನಾನೊಬ್ಬನಂತೂ ಕರನಿರಾಕರಣೆ ಮಾಡಲು ಸಿದ್ಧನಿದ್ದೇನೆ" ಎಂದು ಭಾಷೆ ಕೊಟ್ಟು ಕೈಮುಗಿದು ಕುಳಿತರು. ಈ ವಯೋವೃದ್ಧರ ಧೀರ ನಿಲುವು, ಛಲದ ಗುಡುಗು, ಹುರುಪು ನಾಡವರ ಜನಾಂಗವನ್ನೇ ಪ್ರೇರೇಪಿಸಿತು, ಇಡೀ ಸಭೆಗೆ ಸಭೆಯೇ ಕರನಿರಾಕರಣೆಗೆ ಒಪ್ಪಿಗೆ ನೀಡಿತು. ಇಡೀ ಸಮಾಜವೇ ಕರನಿರಾಕರಣೆ ಚಳವಳಿಯಲ್ಲಿ ಧುಮುಕಿತು. ಸೂರ್ವೆಯಲ್ಲಿ ಅಂದು ನಡೆದ ಸಭೆಯಲ್ಲಿ ಅಂಕೋಲಾ ತಾಲೂಕಿನ ಕರನಿರಾಕರಣದ ಚಳುವಳಿ ಬೀಜಾರೋಪಣವಾಯಿತು.

ಸ್ವಾತಂತ್ರ್ಯ ಸಂಗ್ರಾಮದ ಚರಿತ್ರೆಯಲ್ಲಿ ಬಾಸಗೋಡ ರಾಮನಾಯಕರು ಅದ್ವಿತೀಯ ನಾಯಕರೆಂದು ಪ್ರಸಿದ್ಧರಾಗಿದ್ದರು. ೧೯೩೨ ರಲ್ಲಿ ದ.ಪ. ಕರಮರಕರರ ಬಂಧನವಾದ ಮೇಲೆ ಬಾಸಗೋಡ ರಾಮನಾಯಕರು ಕರಬಂಧಿ ಡಿಕ್ಟೇಟರ್ (ಸರ್ವಾಧಿಕಾರಿ) ಆಗಿದ್ದರು. ಸ್ವಾತಂತ್ರ್ಯ ಹೋರಾಟದ ಕಾಲಕ್ಕೆ "The most notable moving spirit in Ankola Taluk (ಅಂಕೋಲ ತಾಲ್ಲೂಕಿನ ಅತ್ಯಂತ ಪ್ರಮುಖ ನಡೆದಾಡುವ ಚೇತನ) ಎಂದು ರಾಮನಾಯಕರು ಕೀರ್ತಿ ಪಡೆದ ಜನಪ್ರಿಯ ನಾಯಕರಾಗಿದ್ದರು. (ಉತ್ತರ ಕನ್ನಡದ ಗೆಝೆಟಿಯರ್–

೧೯೮೫) ಬಾಸಗೋಡ ರಾಮನಾಯಕರು ಅಂಕೋಲಾ ತಾಲ್ಲೂಕಿನ ನಾಡವರ ಪ್ರಶ್ನಾತೀತ ನಾಯಕರಾಗಿದ್ದರು.

ಅಂಕೋಲೆಯಲ್ಲಿ ಕರನಿರಾಕರಣ ಚಳವಳಿ ನಡೆಯಲು ಬಾಸಗೋಡ ರಾಮನಾಯಕರೇ ಮುಖ್ಯ ಕಾರಣರು ಎಂದು ಮಾನ್ಯ ದ. ಪ. ಕರಮರಕರರು ಅಭಿಮಾನದಿಂದ ಹೇಳಿದ ಮಾತು ರಾಮ ನಾಯಕರ ಹೋರಾಟದ ಮನೋಭಾವವನ್ನು ಎತ್ತಿ ತೋರಿಸುತ್ತದೆ.

ಕರಮಕರರ ಸ್ಫೂರ್ತಿದಾಯಕ ಭಾಷಣದಿಂದ ನಾಡವರ ಸ್ತ್ರೀ–ಪುರುಷರು ಕರನಿರಾಕರಣ ಯಜ್ಞಕುಂಡದಲ್ಲಿ ಸರ್ವಸ್ವವನ್ನು ಬಲಿದಾನ ಮಾಡುವ ಪ್ರತಿಜ್ಞೆ ಸ್ವೀಕರಿಸಲು ಮುಂದೆ ಬಂದರು. ಕರ ನಿರಾಕರಣ ಆಂದೋಲನದ ಸಂಘಟನೆಗಾಗಿ ಸ್ಥಳೀಯ ಪ್ರಮುಖರು ಹಳ್ಳಿಹಳ್ಳಿಗಳಲ್ಲಿ ಪ್ರಚಾರ ಕಾರ್ಯ ಕೈಗೊಂಡರು. ನಾಡವರ ಮುಖಂಡರು ಹಳ್ಳಿಯ ಕೂಟ, ಸೀಮೆಯ ಸಭೆಗಳನ್ನು ಸೇರಿಸಿದರು, ಅಲ್ಲಿ ಕರ ನಿರಾಕರಣೆ ಮಾಡಬೇಕೆಂದು ನಿರ್ಣಯವನ್ನು ಸ್ವೀಕರಿಸಲಾಯಿತು.

ಅಂಕೋಲೆಯ ಶಹರದಲ್ಲಿ ವಾಸಿಸುವ ಜಮೀನುದಾರರು ಕರನಿರಾಕರಣೆಗೆ ಬೆಂಬಲ ನೀಡಲಿಲ್ಲ. ತಮಗೆ ಬರಬೇಕಾದ ಗೇಣಿಗೆ ತೊಂದರೆಯಾಗಬಹುದೆಂಬ ಭಯ ಅವರಿಗಿತ್ತು. ಕರಬಂದಿಗೆ ಪ್ರತಿಕೂಲವಾದ ಜಮೀನುದಾರರಿಗೆ ಕೊಡತಕ್ಕ ಗೇಣಿಯನ್ನು ರೈತರು ಕೊಡಲಿಕ್ಕಿಲ್ಲವೆಂದು ಎಚ್ಚರಿಕೆ ಕೊಡಬೇಕೆಂಬ ನಿರ್ಣಯವನ್ನು ಹಳ್ಳಿಯವರು ಸ್ವೀಕರಿಸಿದರು. ಈ ನಿರ್ಣಯ ತಿಳಿದು ಶಹರದ ಜಮೀನುದಾರರು ಗಾಬರಿಯಾದರು. ಅವರು ಕರನಿರಾಕರಣೆಯ ವಿರುದ್ಧ ನಾಡವರ ಹಳ್ಳಿಗಳಲ್ಲಿ ಪ್ರಚಾರ ಮಾಡಲಾರಂಭಿಸಿದರು. ಧಾರವಾಡದವರ ಮಾತು ಕೇಳಿ ನಿಮ್ಮ ಆಸ್ತಿ ಮನೆ ಕಳೆದುಕೊಳ್ಳಬೇಡಿರಿ, ಅವರ ಮಾತಿಗೆ ನೀವು ಮೋಸ ಹೋಗಬೇಡಿರಿ ಎಂದು ಹೇಳಿ ಹಳ್ಳಿಯ ಜನರನ್ನು ಚಳುವಳಿಯಿಂದ ಹಿಂದೆ ಸರಿಸಲು ಪ್ರಯತ್ನಿಸಿದರು. ಪಟ್ಟಣದ ಜಮೀನುದಾರರ ಕುತಂತ್ರ ಫಲಿಸಲಿಲ್ಲ, ಅಂಕೋಲಾ ಪಟ್ಟಣದ ಸ್ವಾತಂತ್ರ್ಯ ಹೋರಾಟಗಾರರ ಯಾರ ಆಸ್ತಿಯೂ ಜಪ್ತಾಗಲಿಲ್ಲ. ಅವರಾರೂ ತಮ್ಮ ಭೂಮಿ, ಮನೆ ಕಳೆದುಕೊಳ್ಳಲಿಲ್ಲ. ಹಾಲಕ್ಕಿಗೌಡರಲ್ಲಿ ಸ್ವಂತ ಜಮೀನು ಭೂಮಿ ಇದ್ದವರು ತೀರಾ ಕಡಿಮೆ. ಅಲ್ಪ



ಸ್ವಲ್ಪ ಭೂಮಿ ಇದ್ದವರಿಗೆ ಪಟ್ಟಣದ ಒಡೆಯರು ಬೆದರಿಕೆ ಹಾಕಿದ್ದರಿಂದ ಅವರು ಅಂಜಿದರು. ಆದರೆ ಉಳುವರೆಯ ರಾಮದಾಸ ಮತ್ತು ಹೊನ್ನಾದಾಸ ಗೌಡರು ಮಾತ್ರ ನಾಡವರ ಹೆಗಲಿಗೆ ಹೆಗಲು ಕೊಟ್ಟು ಕಡೆತನಕ ನಿಂತು ಅನೇಕ ಕಷ್ಟ ನಷ್ಟಗಳನ್ನು ಅನುಭವಿಸಿ ಹೋರಾಟ ಮಾಡಿ ಅಂಕೋಲಾ ತಾಲೂಕು ಗಳಿಸಿದ ಕೀರ್ತಿಯಲ್ಲಿ ಪಾಲುದಾರರಾದರು.

ಕರಬಂದಿಯ ಮೊದಲ ಕಾರ್ಯಕ್ರಮವಾಗಿ ಪಾಟೀಲಕಿಗೆ ರಾಜೀನಾಮೆ ಕೊಡಿಸುವ ಕಾರ್ಯಕ್ರಮವನ್ನು ಅಂಕೋಲಾದಲ್ಲಿ ಚೆನ್ನಾಗಿ ಸಂಘಟಿಸಲಾಗಿತ್ತು. ಅಂಕೋಲಾ ತಾಲ್ಲೂಕಿನಲ್ಲಿ ಮೊಟ್ಟ ಮೊದಲು ಪಟೇಲಿಕೆಗೆ ವಾಸರೆಯ ಸುಬ್ರಾಯ ನಾಯಕರು ರಾಜೀನಾಮೆ ನೀಡಿದರು. ಅವರನ್ನು ಅನುಸರಿಸಿ ಬೋಳೆಯ ಕೃಷ್ಣ ನಾಯಕ, ವಂದಿಗೆಯ ಜೋಗಿ ಗೋವಿಂದ ನಾಯಕ, ಹಿಚ್ಕಡದ ಬೊಮ್ಮಯ್ಯ ಹಮ್ಮಣ್ಣ ನಾಯಕ, ಬಾಲಿ ಮೊದಲಾದವರು ಪಾಟೀಲಕಿಗೆ ಹುದ್ದೆಗೆ ರಾಜೀನಾಮೆ ನೀಡಿದರು. ಪಟೇಲರು ರಾಜೀನಾಮೆ ಸಲ್ಲಿಸಲು ಮೆರವಣಿಗೆಯಲ್ಲಿ ಹೊರಟ ದಿನ ಪೊಲೀಸರು ಇವರ ಮೇಲೆ ಲಾಠಿ ಪ್ರಹಾರ ಮಾಡಿದರು. ಕರಬಂದಿಯ ಪೂರ್ವಸಿದ್ಧತೆಗಾಗಿ ೨೪ ಸತ್ಯಾಗ್ರಹ ಶಿಬಿರಗಳನ್ನು ಸ್ಥಾಪನೆ ಮಾಡಿದರು. ೨೪ ಶಿಬಿರಗಳಲ್ಲಿ ೨೨ ಶಿಬಿರಗಳು ನಾಡವರ ಹಳ್ಳಿಗಳಲ್ಲಿ ಸ್ಥಾಪನೆಗೊಂಡಿದ್ದವು. ಶ್ರೀಮತಿ ಕೃಷ್ಣಬಾಯಿ ಅವರು ಕರಮರಕರರ ಜೊತೆ ಬಂದು ಹಳ್ಳಿಹಳ್ಳಿಗೆ ಹೋಗಿ ಪ್ರಚಾರ ಮಾಡಿದರು. ಕೃಷ್ಣಾಬಾಯಿ ಅವರ ಭಾಷಣ ನಾಡವರ ಮಹಿಳೆಯರ ಮೇಲೆ ತುಂಬಾ ಪ್ರಭಾವವನ್ನುಂಟುಮಾಡಿತ್ತು.

ಸರಕಾರದ ಪರವಾಗಿ ಕರಬಂದಿ ತಡೆಯಲು ವಿವಿಧ ರೀತಿಯ ಪ್ರಯತ್ನಗಳು ನಡೆದವು. ಅಧಿಕಾರಿಗಳು ಊರೂರಿಗೆ ಬಂದು ಖಾತೆದಾರರಿಗೆ ಕರಬಂದಿ ಬಿಟ್ಟುಬಿಡುವಂತೆ ಉಪದೇಶ ಮಾಡಿದರು. ಮಾಮಲೇದಾರರು ಸೂರ್ವೆ ಹಳ್ಳಿಗೆ ಬಂದು ಜನರಿಗೆ ಕರಬಂದಿ ಮಾಡಬೇಡಿರೆಂದು ಉಪದೇಶ ಮಾಡುತ್ತಿರುವಾಗ ಸೂರ್ವೆಯ ತಿಪ್ಪು ಹಮ್ಮಣ್ಣ ನಾಯಕ ಎಂಬ ದಿಟ್ಟ ಮಹಿಳೆ ಮುಂದೆ ಬಂದು 'ನಾವು ಮಹಾತ್ಮ ಗಾಂಧಿಯವರ ಮಾತಿನಿಂದ ಕರಬಂದಿ ನಡೆಸಿದ್ದೇವೆ. ಗಾಂಧಿಯವರಿಗಿಂತ ನೀವು ತಿಳಿದವರಲ್ಲ, ನಿಮ್ಮ ಒಂದು ಸರಕಾರಿ ನೌಕರಿಗಾಗಿ ಸ್ವರಾಜ್ಯಕ್ಕೆ ಅಡ್ಡ ಬಂದು ಪಾಪ ಕಟ್ಟಿಕೊಳ್ಳಬೇಡಿರಿ' ಎಂದಳು. ತಿಪ್ಪಕ್ಕನ ಮಾತುಕೇಳಿ ಮಾಮಲೇದಾರರು ಬಾಯಿಮುಚ್ಚಿಕೊಂಡು

ತಲೆತಗ್ಗಿಸಿಕೊಂಡು ಹೊರಟುಹೋದರು. ಮತ್ತೆ ಮಾಮಲೇದಾರರು ಯಾವ ಹಳ್ಳಿಗೂ ಹೋಗಲಿಲ್ಲ.

ಧೀರೆ ಸೂರ್ವೆಯ ತಿಪ್ಪಕ್ಕನಂತೆ ವಾಸ್ರೆಯ ಬೊಮ್ಮಯ್ಯ ನಾಯಕರ ಮನೆಗೆ ಹಾಕಿದ ಬೀಗಮುದ್ರೆಯನ್ನು ಒಡೆದ ವೀರ ಮಹಿಳೆ ಮಾಣುದೇವಿಯ ಸಾಹಸ ಅಪೂರ್ವವಾದುದು. ಬೀಗಮುದ್ರೆಯನ್ನು ಒಡೆಯಲು ಮುನ್ನುಗ್ಗಿದ ಮಾಣು ದೇವಿಯನ್ನು ಹೊರಗೆ ಎಳೆದು ಹಾಕಿದರು. ಮತ್ತೆ ಒಳನುಗ್ಗಲು ಪ್ರಯತ್ನಿಸಿದ ಮಾಣು ದೇವಿಯ ಚಂಡಿಕೆ ಹಿಡಿದು ಕೆಡವಿ ಬೂಟು ಕಾಲಿನಿಂದ ಒದ್ದು ಕಪಾಲಿಗೆ ಏಟು ಕೊಟ್ಟು ಉರುಳಿಸಿ ಮತ್ತೆ ತುಳಿದು ಕಣ್ಣಿಗೆ ಮೆಣಸಿನ ಪುಡಿಯನ್ನು ತೂರಿದರು. ಆಕೆ ಮೂರ್ಛೆ ಹೋಗಲು ಪೊಲೀಸರು ಆಕೆಯ ಪ್ರಾಣ ಹೋಯಿತೆಂದು ಭಾವಿಸಿ ಅಲ್ಲಿಂದ ಕಾಲ್ಕಿತ್ತರು. ಅವಳನ್ನು ಆ ಊರ ಜನರು ಅಂಕೋಲೆಯ ಆಸ್ಪತ್ರೆಗೆ ಸೇರಿಸಿ ಉಪಚರಿಸಿದರು. ಮಾಣು ದೇವಿ ಗುಣಮುಖವಾಗಿ ಮತ್ತೆ ಬೀಗಮುದ್ರೆ ಒಡೆಯುವ ಕೆಲಸಕ್ಕೆ ಛಲದಿಂದ ಹೋಗಿ ಜೈಲು ಸೇರಿದಳು. ಇಂಥ ವೀರವನಿತೆಯರು ನಾಡವರ ಸಮಾಜದಲ್ಲಿ ಅನೇಕರಿದ್ದರು. ಬರ್ಟ್‌ರ್ಯಾಂಡ್ ರಸೆಲ್ಲರ ಅಧ್ಯಕ್ಷತೆಯಲ್ಲಿ ಕಾರ್ಯ ಮಾಡುತ್ತಿದ್ದ ಇಂಪೀರಿಯಲ್ ಲೀಗಿನ ಶಿಷ್ಟ ಮಂಡಳದವರು ೧೯೩೨ ನೇ ಇಸವಿಯಲ್ಲಿ ಉತ್ತರ ಕನ್ನಡ ಜಿಲ್ಲೆಯನ್ನು ಸಂದರ್ಶಿಸಿದಾಗ ಮಾಣು ದೇವಿಯ ಸಾಹಸವನ್ನು ಕುರಿತು ತಮ್ಮ ವರದಿಯಲ್ಲಿ ಬರೆದಿರುವುದನ್ನು ಗಮನಿಸಿದರೆ ಮಾಣು ದೇವಿಯ ಸಾಹಸದ ಕಥೆ ಸ್ವಾತಂತ್ರ್ಯ ಸಂಗ್ರಾಮ ಚರಿತ್ರೆಯಲ್ಲಿ ಜಾಗತಿಕ ಖ್ಯಾತಿಯದ್ದಾಗಿದೆ.

ಉಪ್ಪಿನ ಸತ್ಯಾಗ್ರಹಕ್ಕೆ ಪ್ರಚಂಡ ಜನಬೆಂಬಲ ದೊರಕಿರುವುದನ್ನು ಕಂಡು ಸರಕಾರ ಭಯಪಟ್ಟು ಗವರ್ನರರನ್ನು ಮುಂಬೈಯಿಂದ ಕಾರವಾರಕ್ಕೆ ಕಳುಹಿಸಿದರು. ಗವರ್ನರರನ್ನು ವಿರೋಧಿಸಲು ಜಿಲ್ಲೆಯಾದ್ಯಂತ ಹೋರಾಟಗಾರರು ಸಜ್ಜಾಗಿದ್ದರು, ಆದರೆ ಸರಕಾರ ಕಾರವಾರದ ರಸ್ತೆಯನ್ನು ನಿರ್ಬಂಧಿಸಿತು. ಆ ಸಂದರ್ಭದಲ್ಲಿ ಗುಡ್ಡ–ಬೆಟ್ಟ ಸುತ್ತಿ ಕಾಲು ನಡಿಗೆಯಿಂದ ಜೊತೆಗಾರರೊಂದಿಗೆ ಅಂಕೋಲಾದಿಂದ ಕಾರವಾರದವರೆಗೆ ಹೋಗಿ ಮುಂಬೈಯಿಂದ ಕಾರವಾರದ ಸಮುದ್ರ ದಂಡೆಯಲ್ಲಿ ಬಂದಿಳಿದ



ಗವರ್ನರರಿಗೆ ಅಶಿಕ್ಷಿತ ಮಹಿಳೆ, ಇಂಗ್ಲಿಷ್ ಗೊತ್ತಿಲ್ಲದಿದ್ದರೂ "ಗೋ ಬ್ಯಾಕ್ ಗವರ್ನರ್" ಎಂದು ಘೋಷಣೆ ಕೂಗಿ ಕಪ್ಪು ಬಾವುಟ ತೋರಿಸಿದ ದಿಟ್ಟ ಮಹಿಳೆ ಕಣಗಿಲದ ಕಾಣಿ ಬೊಮ್ಮಕ್ಕನ ಸಾಹಸ ಧೈರ್ಯವನ್ನು ಮರೆಯುವುದು ಸಾಧ್ಯವಿಲ್ಲ.

ಹಳ್ಳಿಗಳಲ್ಲಿ ಅಧಿಕಾರಿಗಳಿಗೆ, ಪೋಲೀಸರಿಗೆ ಯಾವ ಸಹಕಾರವೂ ದೊರೆಯಲಿಲ್ಲ. ನೀರಡಿಸಿದ ಅಧಿಕಾರಿಗಳಿಗೆ ನೀರು ಸಹ ಸಿಗಲಿಲ್ಲ. ಇಡೀ ಹಳ್ಳಿಗೆ ಹಳ್ಳಿಯೇ ಕರಬಂದಿಯ ಕೋಟೆಯಾಗಿತ್ತು. ತೀರ್ವೆಯ ವಸೂಲಿಗೆ ಸರಕಾರದಿಂದ ಜಪ್ತಿಯ ಕ್ರಮಗಳು ನಡೆದವು. ಎಮ್ಮೆ, ಗಾಡಿ, ಎತ್ತುಗಳು ಹಾಗೂ ಬೆಲೆ ಬಾಳುವ ನಿತ್ಯೋಪಯೋಗಿ ವಸ್ತುಗಳೆಲ್ಲವನ್ನು ಜಪ್ತಿ ಮಾಡಿದರು. ನಿತ್ಯದ ಅಡಿಗೆಗಾಗಿ ಇದ್ದ ಅಕ್ಕಿ, ಪಾತ್ರೆಗಳನ್ನು ಕೂಡ ಜಪ್ತಿ ಮಾಡಿ ಒಯ್ದರು. ನಾಡವರ ಮನೆಗಳೆಲ್ಲ ಬಹುತೇಕ ಬರಿದಾಗಿತ್ತು. ಕೈಗೆ ಸಿಕ್ಕ ವಸ್ತು, ಸೀರೆ, ಕೋಳಿ, ತೆಂಗಿನಕಾಯಿ, ಅಡಿಕೆ, ಬಾಳೆಗೊನೆ ಎಲ್ಲವನ್ನು ಜಪ್ತಿಯ ಹೆಸರಿನಲ್ಲಿ ಲೂಟಿ ಮಾಡಿ ಒಯ್ದರು. ಆದರೂ ನಾಡವರು ಧೈರ್ಯಗೆಡಲಿಲ್ಲ, ತೀರ್ವೆ ಕೊಡಲಿಲ್ಲ.

ಒಂದು ಕಡೆ ಸರಕಾರ ತೀವ್ರವಾದ ಜಪ್ತಿ ಕ್ರಮದ ಮೂಲಕ ಹಳ್ಳಿಗರನ್ನು ಭಯ ಬೀತಿಗೊಳಿಸಿದರೆ ಇನ್ನೊಂದೆಡೆ ಪೊಲೀಸರು ದಬ್ಬಾಳಿಕೆ ನಡೆಸಿದ್ದರು. ಹಗಲು–ರಾತ್ರಿಯೆನ್ನದೆ ಊರು–ಮನೆ–ಕೇರಿಗಳಿಗೆ ಮುತ್ತಿಗೆ ಹಾಕುತ್ತಿದ್ದರು. ಸಿಕ್ಕ ಸಿಕ್ಕವರನ್ನು ಹಿಡಿದು ಪೀಡಿಸುತ್ತಿದ್ದರು, ಮನೆ ಹೊಕ್ಕು ಮಲಗಿದ ಹೆಂಗಸರನ್ನು ಎಬ್ಬಿಸಿ ನಿಮ್ಮ ಗಂಡಂದಿರನ್ನು ತೋರಿಸಿ ಎಂದು ಗದರಿಸುತ್ತಿದ್ದರು. ಹೆಂಗಸರು ಅವರ ದಾಳಿಯನ್ನು ಪ್ರತಿಭಟಿಸಿದರೆ ಆಕೆಯ ಸೀರೆಗೆ ಕೈಹಚ್ಚಿ ಎಳೆದು ನಿಮ್ಮ ಗಂಡನನ್ನು ತಂದು ಕೊಡದಿದ್ದರೆ ಬತ್ತಲೆ ನಿಲ್ಲಿಸುವುದಾಗಿ ಬೆದರಿಸುತ್ತಿದ್ದರು. ಅಪಮಾನದ ಮಾತುಗಳನ್ನು ಆಡುತ್ತಿದ್ದರು. ಕರಬಂದಿಯ ಕಾರಣದಿಂದಾಗಿ ನಾಡವರು ತುಂಬಾ ಕಷ್ಟ–ಕಾರ್ಪಣ್ಯಗಳನ್ನು ಅನುಭವಿಸಿದರು. ಭೂಮಿ, ಮನೆ, ದನಕರುಗಳೆಲ್ಲ ಜಪ್ತಾಗಿ ಉದ್ಯೋಗ ವ್ಯವಸಾಯ ನಿಂತುಹೋಯಿತು. ಫೋರ್‌ಫೀಟಾದ (ವಶಪಡಿಸಿಕೊಳ್ಳಲಾದ) ಮನೆಗಳಲ್ಲಿ ಪೊಲೀಸರು ಬಂದು ವಾಸಮಾಡಿದರು. ಊರಲ್ಲಿರುವ ಹೆಂಗಸರು, ಮಕ್ಕಳು, ಮುದುಕರಿಗೆ ಇರಲು

ಮನೆಯಿಲ್ಲದೆ ಹುಲ್ಲಿನ ಸಣ್ಣ–ಸಣ್ಣ ಗುಡಿಸಲುಗಳಲ್ಲಿ ಹಾಗೂ ಹೆರವರ ಮನೆಯ ಜಗುಲಿಯಲ್ಲಿ ಇರಬೇಕಾಯಿತು. ಉಣ್ಣಲು ತಿನ್ನಲು ಇಲ್ಲದೆ ಬಟ್ಟೆ ಬರೆ ಇಲ್ಲದೆ ದಾರುಣ ಪರಿಸ್ಥಿತಿಯಲ್ಲಿ ಜನರು ಕಾಲ ಕಳೆಯಬೇಕಾಯಿತು. ಚಳವಳಿಯನ್ನು ಬಗ್ಗುಬಡಿಯಲು ಸರಕಾರವು ನಾನಾ ಬಗೆಯಾಗಿ ಜನರನ್ನು ಪೀಡಿಸಿತು. ಕೇವಲ ನಾಲ್ಕಾರು ರೂಪಾಯಿಗಳ ತೀರ್ವೆ ಬಗ್ಗೆ ನೂರಾರು ರೂಪಾಯಿಗಳ ವಸ್ತುಗಳನ್ನು ಜಪ್ತಿ ಮಾಡಿದರು. ಯಾವ ಕಷ್ಟವನ್ನೂ ಲೆಕ್ಕಿಸದೆ, ಸರ್ಕಾರಕ್ಕೆ ಶರಣಾಗಬಾರದೆಂದು ಹಟ ಹಿಡಿದು ಹೋರಾಟ ಮುಂದುವರಿಸಿದರು.

ಸರದಾರ ವೆಂಕಟರಾಮಯ್ಯನವರು ಅಂಕೋಲೆಯ ಸತ್ಯಾಗ್ರಹ ಹಾಗೂ ನಾಡವರ ವೀರರನ್ನು ತುಂಬಾ ಮೆಚ್ಚಿಕೊಂಡಿದ್ದರು. "ಅಂಕೋಲಾ ಮೊದಲಿನಿಂದಲೂ ಸತ್ಯಾಗ್ರಹ ಹೋರಾಟದ ಪ್ರಬಲ ಕೇಂದ್ರ. ತಾಲ್ಲೂಕಿನ ಬಹುಸಂಖ್ಯಾತ ಕೋಮು ನಾಡವರದ್ದು. ಅವರೆಲ್ಲ ಧೀರರು, ಬಾಸಗೋಡ ರಾಮಾ ನಾಯಕರು ನಿಷ್ಠಾವಂತ ಕಾರ್ಯಕರ್ತರು, ಹಿರಿಯ ನಾಯಕರು ಜೈಲು ಸೇರಿದಾಗ ಅವರೇ ಮುಂದಾಗಿ ಕರಬಂದಿ ಚಳವಳಿಯನ್ನು ಯಶಸ್ವಿಯಾಗಿ ಮುನ್ನಡೆಸಿ ಕರಬಂದಿ ಡಿಕ್ಟೇಟರ್ ಎಂದು ಹೆಸರಾದರು" (ಸತ್ಯಾಗ್ರಹ ಒಂದು ಜೀವನ ಕಥೆ– ಸರದಾರ ವೆಂಕಟರಾಮಯ್ಯ)

೧೯೩೦ನೇ ಇಸ್ವಿಯ ಕರ ನಿರಾಕರಣೆ ಆಂದೋಲನದಲ್ಲಿ ಅಂಕೋಲಾ ತಾಲ್ಲೂಕಿನಲ್ಲಿ ೮೦೦ ರೈತರು ಭಾಗವಹಿಸಿದರು. ಕನಿಷ್ಟ ೯೦೦ ಜಪ್ತಿಗಳು ನಡೆದವು. ಜಪ್ತಾದ ಜಂಗಮ ಮಾಲಿನ ಸರಾಸರಿ ಬೆಲೆ ೫೫ ಸಾವಿರ ರೂಪಾಯಿಗಳು. ಸುಮಾರು ೬೨೫ ಎಕರೆ ಭತ್ತದ ಗದ್ದೆ ಮುಂತಾದವು ಫೋರ್‌ಫಿಟ್ ಆಗಿ ಸರಕಾರದ ವಶವಾದವು. ೩೫೦೦೦/– ರೂಪಾಯಿ ಪುಂಡುಗಂದಾಯ ವಸೂಲಿ ಮಾಡಲಾಯಿತು. ಇದಲ್ಲದೇ ನೂರಾರು ಜನರಿಗೆ ಶಿಕ್ಷೆಯಾಯಿತು. ಕರ ನಿರಾಕರಣೆ ಸತ್ಯಾಗ್ರಹದಲ್ಲಿ ಸಾಮಾನ್ಯವಾಗಿ ಹಳ್ಳಿಯವರೇ ಮುಖ್ಯವಾಗಿ ಭಾಗವಹಿಸಿದ್ದರು.

## ಹೋರಾಟದ ಹುಲಿ ಉಳುವರೆ ರಾಮದಾಸಗೌಡ

ಸ್ವಾತಂತ್ರ್ಯ ಹೋರಾಟದ ಕರನಿರಾಕರಣೆ ಚಳವಳಿಯ ತ್ಯಾಗವೀರರಲ್ಲಿ ಉಳುವರೆ ರಾಮದಾಸಗೌಡರು ಒಬ್ಬರು. ಸ್ವಾತಂತ್ರ್ಯ ಸಂಗ್ರಾಮದ ಚರಿತ್ರೆಯಲ್ಲಿ 'ಉಳುವರೆ ಎಂದೆಂದೂ ಮರೆಯದ ಹೆಸರು.' ಇದೊಂದು ಗಂಗಾವಳಿ ನದಿಯ ದಂಡೆಯ ಮೇಲಿರುವ, ಹಾಲಕ್ಕಿಗೌಡರೇ ಪ್ರಧಾನವಾಗಿ ವಾಸವಾಗಿರುವ ಒಂದು ಸಣ್ಣ ಊರು. ೧೯೩೨ರ ಕಬ್ಬಿನ ತೋಟದ ಸತ್ಯಾಗ್ರಹ ಹಾಗೂ ೧೯೪೨ರ ಜಂಗಲ್ ಸುಟ್ಟ ಘಟನೆ ಇವೆರಡೂ ಉಳುವರೆಯಲ್ಲಿಯೇ ನಡೆದವು. ಹಾಲಕ್ಕಿ ಗೌಡರು ಈ ಬಗೆಯಾಗಿ ಚಳವಳಿಯಿಂದ ಪ್ರೇರಿತರಾಗಿ ಸರಕಾರದ ವಿರುದ್ಧ ಸಿಡಿದೆದ್ದ ಆದಿವಾಸಿಗಳಾದ ಹಾಲಕ್ಕಿಗೌಡರ ಹಳ್ಳಿಗಳಲ್ಲಿ ಉಳುವರೆ ಹಳ್ಳಿಯೇ ಮೊದಲನೆಯದು. ಉಳುವರೆಯ ರಾಮದಾಸ, ಹೊನ್ನಾದಾಸ ಗೌಡರು ಎಂಥ ಕಷ್ಟ ನಷ್ಟಗಳು ಬಂದರೂ ಕರ ನಿರಾಕರಣೆಯ ಆಂದೋಲನದಲ್ಲಿ ಭಾಗವಹಿಸಿ ನಾಡವರಿಗೆ ದೊರೆತ ಕೀರ್ತಿಯಲ್ಲಿ ಹಾಲಕ್ಕಿ ಗೌಡರೂ ಪಾಲುಗಾರರೆಂಬುದನ್ನು ಸಿದ್ಧಮಾಡಿಕೊಟ್ಟರು (ಕರ ನಿರಾಕರಣೆ ವೀರಕಥೆ– ದಿವಾಕರ)



ರಾಮದಾಸಗೌಡನ ತಂದೆ ಹೊಲೆಯಪ್ಪಗೌಡರು ಅಪ್ಪಟ ದೇಶಾಭಿಮಾನಿಯಾಗಿದ್ದರು. ಸಾಯುವ ಕಾಲದಲ್ಲಿ ತಂದೆಗಿತ್ತ ವಚನವನ್ನು ಪಾಲಿಸುವುದಕ್ಕೆ ರಾಮದಾಸಗೌಡರು ಬದ್ಧರಾಗಿದ್ದರು. ತಮ್ಮ ಆಸ್ತಿಯೆಲ್ಲವೂ ಕೈ ಬಿಟ್ಟರೂ, ಹೆಂಡತಿ ಮಕ್ಕಳು ಉಪವಾಸ ಬಿದ್ದರೂ, ಪ್ರಾಣಕ್ಕೆ ಕುತ್ತು ಬಂದರೂ ಕಂದಾಯ (ತೀರ್ವೆ) ಕಟ್ಟಲು ಅವರು ಒಪ್ಪಲಿಲ್ಲ. ಅಧಿಕಾರಿಗಳು ಮತ್ತು ಬಹದ್ದೂರಖಾನನ ಕಾಟಕ್ಕೆ ಜಗ್ಗಲಿಲ್ಲ, ಬೆದರಲಿಲ್ಲ. ಭತ್ತದ ಗದ್ದೆ ನಾಶವಾಯಿತು, ಕಬ್ಬಿನ ಗದ್ದೆ ಭಸ್ಮವಾಯಿತು. ಆದರೂ ರಾಮದಾಸಗೌಡರ ಕುಟುಂಬ ಭಯ ಪಡಲಿಲ್ಲ. ಉಳುವರೆಯ ಹಾಲಕ್ಕಿ ಗೌಡರಿಗೆ ನಾಡವರ ಬೆಂಬಲ ಸಹಾನುಭೂತಿ ಇಷ್ಟು ಪ್ರಮಾಣದಲ್ಲಿ ಇದ್ದೀತೆಂದು ಬಹದ್ದೂರಖಾನನು ಊಹಿಸಿರಲಿಲ್ಲ.

೧೯೩೪ರಲ್ಲಿ ೪೮ನೇ ಕಾಂಗ್ರೆಸ್ ಅಧಿವೇಶನ ಮುಂಬೈಯಲ್ಲಿ ಸೇರಿತು. ಈ ಅಧಿವೇಶನಕ್ಕೆ ಕರಮಕರರು ಕರನಿರಾಕರಣೆಯ ಸತ್ಯಾಗ್ರಹದ ಕೆಲವು ಕಾರ್ಯಕರ್ತರನ್ನು ಕರೆದುಕೊಂಡು ಮುಂಬೈಗೆ ಹೋಗಿದ್ದರು. ಅವರಲ್ಲಿ ರಾಮದಾಸಗೌಡರು ಒಬ್ಬರಾಗಿದ್ದರು. ಅಧಿವೇಶನದ ಅಧ್ಯಕ್ಷರಾದ ಡಾ. ರಾಜೇಂದ್ರ ಪ್ರಸಾದರಿಗೆ ಮತ್ತು ವಲ್ಲಭ ಭಾಯಿ ಪಟೇಲರಿಗೆ ಕರಮರಕರರು ರಾಮದಾಸ ಗೌಡರನ್ನು ಪರಿಚಯಿಸಿದರು ಮತ್ತು ಅವರ ಹೋರಾಟದ ಕಥೆಯನ್ನು ತಿಳಿಸಿದರು. ರಾಮದಾಸಗೌಡರ ತ್ಯಾಗ, ಶ್ರದ್ಧೆ, ದೇಶಾಭಿಮಾನದ ಕತೆ ಕೇಳಿ

ರಾಜೇಂದ್ರ ಪ್ರಸಾದ ಹಾಗೂ ವಲ್ಲಭ ಭಾಯಿ ಪಟೇಲರು ಆಶ್ಚರ್ಯಗೊಂಡು ಸಂತೋಷಪಟ್ಟು ಮೆಚ್ಚುಗೆ ಸೂಚಿಸಿದರು.

ದೇಶದ ಸ್ವಾತಂತ್ರ್ಯ ಸಂಗ್ರಾಮದ ಚರಿತ್ರೆಯಲ್ಲಿ ಕರನಿರಾಕರಣೆಯ ವೀರ ವಿಕ್ರಮ ಕತೆಯ ಉಳುವರೆಯ ರಾಮದಾಸಗೌಡರನ್ನು ನೆನಪಿಸಿಕೊಳ್ಳಲೇಬೇಕು.

**ಬಹದ್ದೂರ್‌ಖಾನನ ಹಾವಳಿ :**

ಬಹಾದ್ದೂರಖಾನನು ಒಬ್ಬ ನಿವೃತ್ತ ಮಿಲಿಟರಿ ಅಧಿಕಾರಿಯಾಗಿದ್ದನು, ದರ್ಪದ ಅಧಿಕಾರಿಯಾಗಿದ್ದನು. ಕರಬಂದಿ ಚಳವಳಿಗಾರರನ್ನು ಬಗ್ಗುಬಡಿಯಲು ಸರಕಾರ ಇವನನ್ನು ನೇಮಿಸಿತ್ತು. ಉಳುವರೆಯ ರಾಮದಾಸ ಗೌಡನ ಕುಟುಂಬದವರು ಬಹದ್ದೂರ್ ಖಾನನ ದೌರ್ಜನಕ್ಕೆ ಒಳಗಾಗಿದ್ದರು. ಆದರೂ ಸರಕಾರಕ್ಕೆ ತೀರ್ವೆ ಕೊಡದೆ ಕರಬಂದಿ ವೀರರಾಗಿ ಮೆರೆದಿರುವರು. ಬತ್ತದ ಬೆಳೆ ಕೊಯ್ಯುವ ಹಂಗಾಮು ಸರಕಾರದವರಿಗೆ ಸ್ಥಳೀಯವಾಗಿ ಕೂಲಿ ಜನರು ಸಿಗದೇ ಬಹದ್ದೂರ್‌ಖಾನನು ಕಾರವಾರದಿಂದ ಕೂಲಿಕಾರರನ್ನು ತಂದು ರಾಮದಾಸಗೌಡರ ಗದ್ದೆಯ ಬೆಳೆಯನ್ನು ಕೊಯ್ಯಲು ಪ್ರಾರಂಭಿಸಿದನು. ಆದರೆ ಬಹದ್ದೂರ್‌ಖಾನನ ಹಿಂಸೆ, ಪೀಡನೆಯನ್ನು ಸಹಿಸದ ಸುತ್ತಮುತ್ತಲಿನ ಊರುಗಳ ನಾಡವರು ರಾಮದಾಸರ ನೆರವಿಗೆ ಬಂದು ಬಹದ್ದೂರ್‌ಖಾನನಿಗೂ ಹೊಲಗಳ ಬೆಳೆ ಕೈಗೆ ಸಿಗದಂತೆ ಬಡಿಗೆಯಿಂದ ಭತ್ತವನ್ನು ಉದುರಿಸಿಬಿಟ್ಟರು. ದೊಡ್ಡ ಪೊಲೀಸ್ ದಳವನ್ನೇ ತಂದ ಬಹದ್ದೂರ್‌ಖಾನ ರೋಷದಿಂದ ಮೈಯನ್ನೆಲ್ಲಾ ಪರಚಿಕೊಂಡನು. ಅವನ ದೌರ್ಜನ್ಯ ನಡೆದೇ ಇತ್ತು. ಆದರೆ ರಾಮದಾಸಗೌಡರ ಕುಟುಂಬಕ್ಕೆ ನಾಡವರು ಬೆಂಗಾವಲಾಗಿದ್ದರು.

**ಉಳುವರೆಯ ಕಬ್ಬಿನ ತೋಟ ಭಸ್ಮ :**

ಉಳುವರೆಯಲ್ಲಿ ಫೋರ್‌ಫಿಟ್ ಆದ ಜಮೀನಿನಲ್ಲಿ ರಾಮದಾಸಗೌಡನ ಕುಟುಂಬ ಹಾಗೂ ಇತರ ಗೌಡರು ಕಬ್ಬಿನ ತೋಟ ಬೆಳೆಸಿದ್ದರು. ಆ ಕಬ್ಬಿನ ತೋಟದ ಕಾವಲಿಗೆ ಬಹದ್ದೂರ್ ಖಾನ ಪೊಲೀಸ್ ಪಡೆಯನ್ನು ಕರೆಸಿದ್ದನು. ಬೆಲ್ಲ ಮಾಡುವ ಸಮಯ ಬಂತು. ಆ ಕಬ್ಬಿನ ಬೆಳೆ ಸರಕಾರ ಅಥವಾ ಬಹದ್ದೂರ ಖಾನನ ಪಾಲಾಗುವುದು ಚಳವಳಿಗಾರರಿಗೆ ಇಷ್ಟವಿರಲಿಲ್ಲ. ಬಹದ್ದೂರ್ ಖಾನನ ದೌರ್ಜನ್ಯಕ್ಕೆ ರೊಚ್ಚಿಗೆದ್ದ ನಾಡವರು ಉಳುವರೆಯ ಗೌಡರನ್ನು ಮುಂದೆ ಮಾಡಿಕೊಂಡು ಸುತ್ತ ಮುತ್ತಲಿನ ನಾಡವರ ಊರುಗಳಿಂದ ಸುಮಾರು ೫೦೦ ಜನರು ಸೇರಿ ಬಾಸಗೋಡ ರಾಮನಾಯಕರ ನೇತೃತ್ವದಲ್ಲಿ ಕಬ್ಬು ಕಡಿಯಲು ಪ್ರಾರಂಭಿಸಿದರು. ರೈತರು ಕಬ್ಬಿನ ತೋಟದ ಬಳಿ ಬರದಂತೆ ಪೊಲೀಸರು ತಡೆದರು, ಆದರೆ ಜನರು ಮುನ್ನುಗ್ಗಿದರು. ಪೊಲೀಸರು ಲಾಠಿ ಬೀಸಿ ಬಡಿಯಹತ್ತಿದರು, ಹಲವರ ಕೈಕಾಲುಗಳು ಮುರಿದವು, ಕೆಲ ಗೌಡರ ಮಕ್ಕಳು ಮೂರ್ಛೆ ಹೋದರು. ಈ ಗೊಂದಲದಲ್ಲಿ ಹೋರಾಟಗಾರರು ಸಿಟ್ಟಿಗೆದ್ದು ಕಬ್ಬಿನ ತೋಟವನ್ನೇ ಸುಟ್ಟುಬಿಟ್ಟರು. ಮತ್ತೊಮ್ಮೆ ಬಹದ್ದೂರ್ ಖಾನನಿಗೆ ದೊಡ್ಡ ನಿರಾಸೆಯಾಯಿತು. ಅವನು ತಲೆ ಕೆಟ್ಟ ಹುಚ್ಚನಂತೆ ವರ್ತಿಸತೊಡಗಿದನು. ಕಬ್ಬಿನ ಬೆಳೆಯ ಹಾನಿಗಾಗಿ ಬಹದ್ದೂರ್ ಖಾನನು ಪುಂಡುಗಂದಾಯ ಜಾರಿ ಮಾಡಿ ಜಬರ್ದಸ್ತಿಯಿಂದ ವಸೂಲಿ ನಡೆಯಿತು. ಚಳವಳಿಕಾರರ ನಿಷ್ಠೆಯ ಒಗ್ಗಟ್ಟಿನ ಮುಂದೆ ಸರಕಾರದ ಆಟ ನಡೆಯಲಿಲ್ಲ. ಅದಕ್ಕಾಗಿಯೇ ಅಂಕೋಲೆ ಕರ್ನಾಟಕದ ಬಾರ್ಡೋಲಿ ಎಂದು ಹೆಸರಾದುದು.



**ವೈಯಕ್ತಿಕ ಸತ್ಯಾಗ್ರಹ :**

೧೯೪೦ರ ವೈಯಕ್ತಿಕ ಸತ್ಯಾಗ್ರಹದಲ್ಲಿ ಪಾಲ್ಗೊಳ್ಳುವವರು ತತ್ವನಿಷ್ಠರಿದ್ದು ಅಹಿಂಸಾತ್ಮಕ ತತ್ವವನ್ನು ತಪ್ಪದೇ ಪಾಲಿಸುವವರು ಇರಬೇಕಾಗಿತ್ತು. ಅದಕ್ಕಾಗಿ ವಿನೋಬಾ ಭಾವೆಯುವರನ್ನು ಮೊದಲನೆಯ ಸತ್ಯಾಗ್ರಹಿಯಾಗಿ ಗಾಂಧೀಜಿಯವರು ಆರಿಸಿದರು. ಇಡೀ ದೇಶದಲ್ಲಿ ವಿನೋಬಾ ಭಾವೆ, ನೆಹರು, ಪಟೇಲ, ಅಝಾದ ಮೊದಲಾದ ೨೪೦೦ ಜನರು ಮಾತ್ರ ಆಯ್ಕೆಯಾಗಿದ್ದರು. ಈ ರೀತಿ ಆಯ್ಕೆಯಾದ ತತ್ವನಿಷ್ಠ ಆದರ್ಶ ಸತ್ಯಾಗ್ರಹದಲ್ಲಿಯೂ ಅಂಕೋಲಾ ತಾಲೂಕಿನ ಸಾಂತು ಬೊಮ್ಮಯ್ಯ ನಾಯಕ, ಕರ್ನಮನೆ, ಹಿಚಕಡ, ಬೀರಣ್ಣ ನಾಯಕ ಹಿಚಕಡ, ವೆಂಕಟರಮಣ ನಾಯಕ ದೊಡ್ಮನೆ ಮೊಗಟಾ, ವೆಂಕಟರಮಣ ಬೊಮ್ಮ ನಾಯಕ ಹಿರೇಗುತ್ತಿ, ಜಿ. ಎಮ್. ಕಾಮತ ಅಂಕೋಲಾ ಇವರುಗಳು ಆಯ್ಕೆಯಾಗಿ ಯುದ್ಧ ವಿರುದ್ಧ ಘೋಷಣೆ ಮಾಡಿ ಶಿಕ್ಷೆ ಅನುಭವಿಸಿದರು. ಅಂಕೋಲಾ ತಾಲೂಕಿನ ವೀರಯೋಧರಿಗೆ ಸಂದ ಗೌರವವಿದು.

**ಚಲೇಜಾವ್ ಚಳುವಳಿ :**

ಚಲೇಜಾವ್ ಚಳವಳಿ ಭಾರತದ ಸುದೀರ್ಘ ಹೋರಾಟದಲ್ಲಿ

ನಿರ್ಣಾಯಕ ಸಂಗ್ರಾಮವಾಗಿತ್ತು. ಕರ್ನಾಟಕದ ಧುರೀಣರು ಕಾರ್ಯಕ್ರಮ ರೂಪಿಸಿದರು. ಬಹಿರಂಗ ವಿರೋಧವಲ್ಲದೆ ಸರಕಾರದ ಆಡಳಿತ ಯಂತ್ರವನ್ನು ಅಸ್ತವ್ಯಸ್ತಗೊಳಿಸಬಹುದೆಂಬ ಪರಿಪತ್ರವನ್ನು ಅಂಕೋಲಾ ತಾಲೂಕಿನ ಕಾರ್ಯಕರ್ತರಿಗೆ ಪ್ರದೇಶ ಕಾಂಗ್ರೆಸ್ ಕಮಿಟಿಯ ಪರವಾಗಿ ದಿವಾಕರರು ಸುತ್ತೋಲೆ ಕಳುಹಿಸಿದರು. ಅಂಕೋಲೆಯ ಸ್ಥಳೀಯ ಮುಖಂಡರಾದ ಶಾಮರಾವ್ ಶೇಣ್ವಿ, ಬಾಬು ಕಾಮತ್ ಮತ್ತು ಬಾಸಗೋಡ ರಾಮನಾಯಕ ಮೊದಲಾದವರನ್ನು ಜೈಲಿಗೆ ಒಯ್ಯಲಾಗಿತ್ತು. ದಿವಾಕರರ ಗುಪ್ತ ಸುತ್ತೋಲೆ ಅಂಕೋಲಾ ತಾಲೂಕಿನ ಹಳ್ಳಿಗಳ ಮೂಲೆಮೂಲೆಗೂ ಮಿಂಚಿನಂತೆ ಸಂಚರಿಸಿತು. ಜಿಲ್ಲೆಯ ಹಾಗೂ ರಾಜ್ಯದ ಮುಖ್ಯ ಧುರೀಣರನ್ನು ಸೆರೆಮನೆಗೆ ಕಳುಹಿಸಲಾಗಿತ್ತು. ಈ ಚಳವಳಿಯ ಕಾವು ವಿಶೇಷವಾಗಿ ಬಿಸಿರಕ್ತದ ನಾಡವರ ತರುಣರನ್ನು ಹುಚ್ಚೆಬ್ಬಿಸಿತು. ಹಿಂದಿನ ಚಳವಳಿಯಲ್ಲಿ ಭಾಗವಹಿಸಿದಂತೆ ಚಲೇಜಾವ್ ಚಳುವಳಿಯಲ್ಲೂ ಕೂಡ ಅಷ್ಟೇ ಹುರುಪು–ಹುಮ್ಮಸ್ಸಿನಿಂದ ಭಾಗವಹಿಸಿ ಧೀರತನವನ್ನು ಮೆರೆದು ಅಂಕೋಲಾ ತಾಲೂಕಿನಲ್ಲಿ ಚಳವಳಿ ರಂಗೇರಲು ಬಹುಮಟ್ಟಿಗೆ ಕಾರಣರಾದರು. ತಾಲೂಕಿನ ಹಳ್ಳಿಗಳ ಎಲ್ಲಾ ಸಮಾಜದ ತರುಣರಲ್ಲಿ ಉತ್ಸಾಹ ತುಂಬಿ ತುಳುಕಾಡಿತು.

ಗಾಂಧೀಜಿಯುವರ ಸಂದೇಶದಿಂದ ಪ್ರೇರಿತರಾದ ನಾಡವರ ಮುಂದಾಳುಗಳಾದ ಹಿಚಕಡದ ಬೀರಣ್ಣ ನಾಯಕ, ಸೂರ್ವೆಯ ಬೀರಣ್ಣ ಬೊಮ್ಮಯ್ಯ ನಾಯಕ, ಕಣಗಿಲದ ಹಮ್ಮಣ್ಣ ನಾಯಕ, ಸಗಡಗೇರಿ ವೆಂಕಟರಮಣ ನಾಯಕ, ವಾಸ್ರೆಯ ಸಾತ ನಾಯಕ ಮೊದಲಾದವರು ಅಲ್ಲಲ್ಲಿ ತಾರು–ತಂತಿ–ಕಂಬಗಳನ್ನು ಉರುಳಿಸಿ ಚಳವಳಿಯನ್ನು ಪ್ರಾರಂಭಿಸಿದರು. ದೇಶಾಭಿಮಾನಿ ಯುವಕರು ಚಳವಳಿಯಲ್ಲಿ ಭಾಗವಹಿಸಲು ಸಮಯ ಹದವಾಗಿತ್ತು. ಹಿಗೆ ಹದಗೊಂಡ ಶುಭ ಗಳಿಗೆಯಲ್ಲಿ ಈ ಭಾಗದ ಪ್ರಸಿದ್ಧ ಸಾಹುಕಾರ ತಂದೆಯ ಮಗ ತರುಣ ವಕೀಲರಾದ ದಯಾನಂದ ಪ್ರಭು, ಗಾಂಧೀಜಿ ಕರೆಯಿಂದ ಪ್ರೇರಿತರಾಗಿ ಚಳವಳಿಯಲ್ಲಿ ಧುಮುಕಿದರು. ಅವರ ಚಟುವಟಿಕೆಗಳನ್ನು ಗಮನಿಸಿ ಪೊಲೀಸರು ಅವರ ಬೆನ್ನಿಗೆ ಬಿದ್ದರು. ಆಗ ದಯಾನಂದ ಪ್ರಭು ಅವರು ಅವರೂರ ಸಮೀಪದ ಹಿಚಕಡಕ್ಕೆ ಬಂದು ನಾಡವರೊಡನೆ ಬೆರೆತರು, ಹಿಚಕಡದ ನಾಡವರು ದಯಾನಂದ ಪ್ರಭುಗಳನ್ನು ಆತ್ಮೀಯವಾಗಿ ಸ್ವಾಗತಿಸಿದರು.



ಅವರು ನಾಡವರೊಡನೆ ಅನ್ಯೋನ್ಯವಾಗಿ ಬೆರೆತು ನಾಡವರಲ್ಲಿ ಒಬ್ಬರಾಗಿ ಬಿಟ್ಟರು. ಹಿಚಕಡದ ಬೀರಣ್ಣ ನಾಯಕರ ಸ್ನೇಹ ದೊರೆತು ಅಲ್ಲಿ ಯುವಕರಿಗೆಲ್ಲ ಹತ್ತಿರದವರಾದರು. ಅಂದಿನಿಂದ ಹಿಚಕಡವು ಚಲೇಜಾವ್ ಚಳವಳಿಯ ಕೇಂದ್ರವಾಯಿತು. ಮುಂದೆ ಈ ಕೇಂದ್ರಸ್ಥಾನದಿಂದ ದಯಾನಂದ ಪ್ರಭುಗಳ ಮುಂದಾಳತ್ವದಲ್ಲಿ ನಾಡವರ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಚಳವಳಿಯ ಚಂಡೆ ಬಾರಿಸಿತು. ಇವರ ಆಗಮನದಿಂದ ಹಳ್ಳಿಗಳ ನಾಡವರ ಉತ್ಸಾಹ ಇಮ್ಮಡಿಯಾಯಿತು. ದಯಾನಂದ ಪ್ರಭು ಚಲೇಜಾವ್ ಚಳವಳಿಯ ಮುಂದಾಳುಗಳಾಗಿ ಕೊನೆಗೆ ಭೂಗತ ನಾಯಕರೆಂದು ಪ್ರಸಿದ್ಧರಾದರು.

ಚಲೇಜಾವ್ ಚಳವಳಿ ಮುಖ್ಯವಾಗಿ ಸ್ಥಳೀಯ ಜನರಿಂದಲೇ ನಡೆಯಿತು. ಚಲೇಜಾವ್ ಚಳವಳಿಯ ಪುಂಡರೆಂದು ಕರೆಯಿಸಿಕೊಂಡ ಹಿಚಕಡ ಬೀರಣ್ಣ ನಾಯಕ, ಸಗಡಗೇರಿ ವೆಂಕಟರಮಣ ನಾಯಕ, ಮತ್ತು ಶಿರೂರಿನ ದಯಾನಂದ ಪ್ರಭು ಈ ಮೂವರು ಗಾಂಧೀಜಿ ಬಿಡುಗಡೆಯಾಗುವ ತನಕ ಸುಮಾರು ಎರಡು ವರ್ಷಗಳ ಕಾಲ ಭೂಗತರಾಗಿದ್ದುಕೊಂಡು ಆಮೇಲೆ ಸರ್ಕಾರಕ್ಕೆ ನೋಟಿಸ್ ಕೊಟ್ಟು ಅಂಕೋಲಾ ಮಾಮಲೇದಾರರ ಮುಂದೆ ಹಾಜರಾದರು. ೧೯೪೨ರ ಚಲೇಜಾವ್ ಚಳವಳಿ ಸತ್ಯಾಗ್ರಹವಲ್ಲದೆ ಸಂಗ್ರಾಮರೂಪ ತಾಳಿತ್ತು. ಭೂಗತರಾಗಿದ್ದುಕೊಂಡೇ ಸರಕಾರದ ಆಡಳಿತ ಸುಸೂತ್ರವಾಗಿ ನಡೆಯದಂತೆ ತೊಡರುಗಳನ್ನೊಡ್ಡುವುದೇ ಮುಖ್ಯ ಉದ್ದೇಶವಾಗಿತ್ತು. ಈ ಚಳವಳಿಯು ಒಂದು ಕೂಟಯುದ್ಧದಂತೆ ನಡೆಯಿತು. ಈ ಕೂಟಯುದ್ಧ ಸಂಘಟನೆಗೆ ಹಿಚಕಡ ಊರಿನಲ್ಲಿ ಬಹಳ ಅನುಕೂಲ ಪರಿಸ್ಥಿತಿ ಇತ್ತು. ಅಂತೆಯೇ ಚಲೇಜಾವ್ ಚಳುವಳಿಯ ರೋಮಾಂಚಕವಾದ ಪ್ರಮುಖ ಘಟನೆಗಳು ಹಿಚಕಡ ಕೇಂದ್ರದಿಂದಲೇ ಸಂಘಟಿತವಾಗಿ ಕಾರ್ಯರೂಪಕ್ಕೆ ಬಂದವು. ಚಳವಳಿಯ ಕ್ರಾಂತಿಯ ಕಿಡಿ ಇಲ್ಲಿಂದಲೇ ಸಿಡಿಯಿತು. (ಭೂಗತ ನೆನಪುಗಳು – ದಯಾನಂದ ಪ್ರಭು)

ಈ ಚಳವಳಿಯಲ್ಲಿ ತರುಣರೇ ಮುಖ್ಯ ಪಾತ್ರಧಾರಿಗಳಾಗಿದ್ದರು. ೧೯೪೨ ಸೆಪ್ಟೆಂಬರ್ ೧೦ ರಂದು ಅಂಕೋಲಾ ತಾಲೂಕಿನ ಮೂಲೆಮೂಲೆಯ ಹಳ್ಳಿಗಳಿಂದ ಬೃಹತ್ ಮೆರವಣಿಗೆ ಕೋಟೆ ಬೇಣಕ್ಕೆ ಬಂದು ಸೇರಿತು. ಸುಮಾರು

ಹತ್ತು ಸಾವಿರಕ್ಕಿಂತ ಹೆಚ್ಚು ಜನರು ದಂಡಧಾರಿಗಳಾಗಿ ಬಂದಿದ್ದರು. "ಬ್ರಿಟಿಷರೆ ಭಾರತದಿಂದ ತೊಲಗಿರಿ, ಸರಕಾರದ ಕೀಲು ಕಳಚಿ ಕೆಡಹುತ್ತೇವೆ, ಬೋಲೋ ಭಾರತ್ ಮಾತಾ ಕಿ ಜೈ ಎಂಬ ಘೋಷಣೆಗಳು, ರಾಷ್ಟ್ರಾಭಿಮಾನ ಕೆರಳಿಸುವ ಉತ್ಸಾಹದಾಯಕ ಹಾಡುಗಳು ಹಾಗೂ ಅಪಾರ ಜನಸಾಗರ ನೋಡಿ ಅಧಿಕಾರಿಗಳು, ಪೊಲೀಸರು ಭಯಗೊಂಡರು. ಆದರೆ ಇದೊಂದು ಶಾಂತಿಯ ಮೆರವಣಿಗೆಯಾಗಿತ್ತು. ಪೋಲೀಸರು ಅಪ್ರಚೋದಿತವಾಗಿ ಲಾಠಿ ಚಾರ್ಜ್ ಮಾಡಿದರು. ಈ ಘಟನೆ ಚಳವಳಿಕಾರರಿಗೆ ಸರಕಾರ ಆಹ್ವಾನ ಕೊಟ್ಟಂತೆ ಆಯಿತು. ಸರಕಾರದ ದಬ್ಬಾಳಿಕೆ ಹೆಚ್ಚಾದಂತೆ ಜನರ ವಿಧ್ವಂಸಕ ಚಟುವಟಿಕೆಗಳು ಜೋರಾದವು. ಅಂತೆಯೇ ರಾತ್ರಿ ಬೆಳಗಾಗುವುದರೊಳಗಾಗಿ ಅಂಕೋಲಾ ಕುಮಟಾ ರಸ್ತೆಗುಂಟ ಇದ್ದ ತಾರು ತಂತಿ ಕಂಬಗಳು ಉರುಳಿಬಿದ್ದವು. ಸಂಕಗಳನ್ನು ಕಿತ್ತು ಕೆಡವಿದರು. ಸರಕಾರದ ಸಂಪರ್ಕ ಕಡಿದು ಬಿದ್ದಿತ್ತು. ಅಗಸೂರಿನಲ್ಲಿ ಟಪಾಲು ಸಾಗಿಸುತ್ತಿದ್ದ ಬಸ್ಸನ್ನು ತಡೆದು ಟಪಾಲು ಚೀಲಗಳನ್ನು ದೋಚಿದರು. ಗಂಗಾವಳಿ ಕಟ್ಟಿಗೆ ಡಿಪೋಕ್ಕೆ ಬೆಂಕಿ ಇಟ್ಟರು, ಗುಂಡಬಾಳ ಫಾರೆಸ್ಟ್ ನಾಕೆಗೆ, ಹೊಸಕಂಬಿ ಬಂಗ್ಲೆಗೆ ಬೆಂಕಿಯಿಟ್ಟರು, ಶಾನಭೋಗರ ದಪ್ತರುಗಳನ್ನು ಕಸಿದುಕೊಂಡರು. ಅಗಸೂರು–ಅಡ್ಲೂರು ಕತ್ತೇ ಹಳ್ಳಿ ಸಂಕಗಳನ್ನು ಕೆಡವಲಾಯಿತು ಗೋಕರ್ಣ, ಮಾದನಗೇರಿ, ಕಾರವಾರ, ಅರಬೈಲ್ ಹೀಗೆ ಎಲ್ಲ ದಿಕ್ಕುಗಳ ತಂತಿ ಕತ್ತರಿಸಿದರು. ಬ್ರಿಟಿಷ್ ಆಡಳಿತವನ್ನು ಅಸ್ತವ್ಯಸ್ತಗೊಳಿಸುವುದೇ ಮುಖ್ಯ ಉದ್ದೇಶವಾಗಿತ್ತು. ಈ ಎಲ್ಲ ಘಟನೆಗಳಲ್ಲಿ ಪ್ರಮುಖ ಪಾತ್ರವಹಿಸಿದವರು ನಾಡವರ ತರುಣರಾಗಿದ್ದರು.

ಬ್ರಿಟಿಷ್ ಆಡಳಿತವನ್ನು ನಿಷ್ಕ್ರಿಯಗೊಳಿಸಲು ಕೈಗೊಂಡ ಹಲವು ಸಣ್ಣಪುಟ್ಟ ಕಾರ್ಯಕ್ರಮಗಳ ಯಶಸ್ಸಿನಿಂದ ಹುರುಪುಗೊಂಡ ಚಳವಳಿಕಾರರು ಉಳುವರೆ ಜಂಗಲ್ ಸುಡುವ ಅಸಾಮಾನ್ಯ ಸಾಹಸಕ್ಕೆ ಸಜ್ಜಾದರು. ಅಂಕೋಲೆಯವರ ಈ ಹೋರಾಟಕ್ಕೆ ಧಾರವಾಡದ ಕೆ.ಜಿ.ಜೋಷಿಯವರ ಸ್ಫೂರ್ತಿ ಹಾಗೂ ಮಾರ್ಗದರ್ಶನ, ದಯಾನಂದ ಪ್ರಭು ಮತ್ತು ಹಿಚಕಡ ಬೀರಣ್ಣ ನಾಯಕರ ಮುಖಂಡತ್ವ ಹಾಗೂ ಹಿಚಕಡ ಹಾಗೂ ಇತರ ಹಳ್ಳಿಗಳ ತರುಣರಲ್ಲಿ ಉಕ್ಕಿಬಂದ ಉತ್ಸಾಹ, ಕೆಚ್ಚು ಈ ಕ್ರಾಂತಿಕಾರಿ ಹಾಗೂ ಗಂಡಾಂತರಕಾರಿ ಸಾಹಸದ ನಿರ್ಣಯ ಕೈಗೊಳ್ಳಲು ಕಾರಣವಾಯಿತು.



ಅಂಕೋಲಾ ತಾಲ್ಲೂಕಿನಲ್ಲಿ ಚಲೇಜಾವ್ ಚಳವಳಿಯನ್ನು ನಾಯಕರ ಹೆಸರಿಗೆ ಕುಂದು ಬಾರದಂತೆ ಗಾಂಧೀಜಿಯವರ ಅಪೇಕ್ಷೆಯಂತೆ ನಡೆಸಿಕೊಂಡು ಕೊನೆಯವರೆಗೂ ಚಳವಳಿಯ ಕಾವನ್ನು ಜನಸಾಮಾನ್ಯರ ಸಹಾನುಭೂತಿ ಮತ್ತು ಪ್ರೀತಿಯನ್ನು ಉಳಿಸಿಕೊಂಡು ಬಂದ ಶ್ರೇಯಸ್ಸು ಭೂಗತ ನಾಯಕರೆಂದು ಪ್ರಸಿದ್ಧರಾದ ಶ್ರೀ ದಯಾನಂದ ಪ್ರಭು ಅವರಿಗೆ ಸಲ್ಲುತ್ತದೆ.

ಚಲೇಜಾವ್ ಚಳವಳಿಯ ಕಾಲದ ಅಸಾಮಾನ್ಯ ಸಾಹಸದ ಕೆಲಸ ಉಳುವರೆ ಜಂಗಲ್ ಸುಟ್ಟ ಪ್ರಕರಣ. ಈ ಕ್ರಾಂತಿ ಕಾರ್ಯಕ್ಕೆ ಶ್ರೀ ದಯಾನಂದ ಪ್ರಭುರವರು ತಮ್ಮ ಸಂಪೂರ್ಣ ಶಕ್ತಿಯನ್ನು ಧಾರೆಯೆರೆದು ತಮ್ಮಿಂದ ಸರ್ವಥಾ ಹಿಂಸೆಯಾಗಬಾರದು, ಅನಾವಶ್ಯಕ ಹಾನಿ ಯಾರಿಗೂ ಎಲ್ಲಿಯೂ ಆಗಬಾರದು ಹಾಗೂ ಗಾಂಧೀಜಿಯವರ ಮನಸ್ಸಿಗೆ ನೋವಾಗಬಾರದು ಎಂಬ ಕಾರಣದಿಂದ ತಮಗೆ ತಾವೇ ಲಗಾಮು ಹಾಕಿಕೊಂಡು ಈ ಅಪೂರ್ವ ಸಾಹಸ ಕಾರ್ಯಕ್ಕೆ ಸನ್ನದ್ಧರಾಗಿ ಮುನ್ನಡೆಸಿದರು.

ಅಂಕೋಲಾ ಕುಮಟಾ ಹೆದ್ದಾರಿಯ ಮೇಲೆ ಉಳುವರೆ ಊರಿನ ಹತ್ತಿರ ಗಂಗಾವಳಿ ನದಿಯಾಚೆಗೆ ವಾಹನಗಳನ್ನು ಹಾಗೂ ಜನರನ್ನು ದಾಟಿಸಲು ಎರಡು ದೋಣಿಗಳನ್ನು ಕೂಡಿಸಿ ಮಾಡಿದ ವಾಹನಕ್ಕೆ 'ಜಂಗಲ್' ಎಂದು ಕರೆಯುತ್ತಾರೆ. ಆ ಕಾಲದಲ್ಲಿ ಈ ಜಂಗಲ್ಲೇ ಮುಖ್ಯವಾದ ಸಂಪರ್ಕ ಸಾಧನವಾಗಿತ್ತು. ಈ ಉಳುವರೆ ಜಂಗಲ್ಲನ್ನು ಸುಡುವ ಕಾರ್ಯಕ್ರಮ ನಿರ್ಧಾರವಾಯಿತು. ಆ ದಿನದಂದು ಅಂಕೋಲಾ ತಾಲ್ಲೂಕಿನ ಸುತ್ತಲಿನ ನಾಡವರ ಹಳ್ಳಿಗಳ ಜನರು ಮತ್ತು ಉಳುವರೆಯ ಕೆಲವು ಹಾಲಕ್ಕಿಗೌಡರು ರಾತ್ರಿ ೨ ಗಂಟೆ ಸಮಯಕ್ಕೆ ಜನರೆಲ್ಲ ಗಾಢ ನಿದ್ರೆಯಲ್ಲಿರುವಾಗ ಶಿರೂರು ಬಯಲಿನಲ್ಲಿ ಸೇರಿದರು. ಈ ರಾತ್ರಿಯ ಮೌನದಲ್ಲಿ ಐವತ್ತು–ಅರವತ್ತು ಜನರು ಸದ್ದು ಮಾಡದೆ ಸಾಗಿ ಜಂಗಲ್ ಕಾಯುತ್ತಿದ್ದ ನಾಲ್ವರು ಪೊಲೀಸ್‌ರ ಪೇದೆಗಳಿಗೆ ಮುತ್ತಿಗೆ ಹಾಕಿದರು. ಅವರಲ್ಲಿ ಒಬ್ಬ ಪೊಲೀಸ್ ಹೇಗೋ ಹೊರಗೆ ಜಿಗಿದು ಬಂದೂಕ ಹಿಡಿದು ಈಡ್ ಮಾಡುವ ಸಿದ್ಧತೆಯಲ್ಲಿದ್ದಾಗ ಹಿಚಕಡ ಬೀರಣ್ಣ ನಾಯಕ ಮತ್ತು ಹಮ್ಮಣ್ಣ ಬೊಮ್ಮಯ್ಯ ನಾಯಕ ಬಾಲಿ ಇವರಿಬ್ಬರು ತಟ್ಟನೆ ಹಾರಿ ಪೊಲೀಸ್‌ನಿಂದ ಬಂದೂಕನ್ನು ಕಸಿದುಕೊಂಡರು. ಇಲ್ಲದಿದ್ದರೆ ಸಾಲಿನಲ್ಲಿ ಮೊದಲಿಗರಾಗಿ ನಿಂತ ದಯಾನಂದ ಪ್ರಭು ಬಂದೂಕಿನ ಈಡಿಗೆ

ಬಲಿಯಾಗುತ್ತಿದ್ದರು. ಸುದೈವದಿಂದ ಅವರು ಬಚಾವಾದರು. ಅತ್ತ ಇನ್ನೊಂದು ಕಡೆ ಕೆ.ಜಿ. ಜೋಶಿಯವರ ಮುಂದಾಳ್ತನದಲ್ಲಿ ಜಂಗಲ್ಲಿಗೆ ಬೆಂಕಿ ಹಚ್ಚುವ ಕಾರ್ಯದಲ್ಲಿ ಒಂದು ಗುಂಪು ನಿರತವಾಗಿತ್ತು. ಜಂಗಲ್ ಮೇಲೆ ಕಟ್ಟಿಗೆ ರಾಶಿಯನ್ನು ಹಾಕಿ ಚಿಮಣಿ ಎಣ್ಣೆ ಸುರಿದು ಬೆಂಕಿಯನ್ನು ಇಟ್ಟರು. ನೋಡ ನೋಡುತ್ತಿರುವಂತೆ ಭಗ್ಗನೆ ಬೆಂಕಿಯಾಗಿ ಜಂಗಲ್ಲಿಗೆ ಕಟ್ಟಿದ ಹಗ್ಗವನ್ನು ಹರಿದು ಬೆಂಕಿಯ ತೆಪ್ಪವನ್ನು ತೇಲಿ ಬಿಡಲಾಯಿತು. ಆದರೆ ಜ್ವಾಲೆ ಮುಗಿಲ ಕಡೆ ಮುಖ ಮಾಡಿ ನದಿಯಲ್ಲಿ ನಿಧಾನವಾಗಿ ತೇಲುತ್ತಾ ಮುಂದೆ ಸಾಗುವ ಬೆಂಕಿಯತೇರಿನ ನೋಟ ರುದ್ರ ಭಯಂಕರವಾಗಿತ್ತು. ಆ ಅಗ್ನಿರಥವನ್ನು ಕಂಡು ದಡದಲ್ಲಿ ನಿಂತು ಚಳವಳಿಗಾರರ ಹರ್ಷೋದ್ಗಾರ ಗಗನಕ್ಕೇರಿತ್ತು. ಚಳವಳಿಗಾರರ ಕೋಪದ ಪತಾಕೆ ಎಂಬಂತೆ ಆ ಬೆಂಕಿಯ ತೇರು ತೇಲುತ್ತಾ ಸಮುದ್ರದೆಡೆಗೆ ಸಾಗಿದ ನೋಟ ಅದ್ಭುತವಾಗಿತ್ತು.

ಇದೊಂದು ಸಾಹಸಪೂರ್ಣ ರೋಮಾಂಚಕಾರಿ ಘಟನೆಯಾಗಿತ್ತು. ಜಿಲ್ಲೆಯ ಆಡಳಿತ ಯಂತ್ರಕ್ಕೆ ಅತ್ಯಂತ ಅಚ್ಚರಿಯ ಹಾಗೂ ಆಘಾತಕಾರಿ ವಿಷಯವಾಗಿತ್ತು. ಸುದ್ದಿ ತಿಳಿದು ಸಿಡಿಲು ಬಡಿದಂತಾಗಿತ್ತು. ಪೊಲೀಸರು ಅಪಮಾನದಿಂದ ಮೈಪರಚಿಕೊಂಡರು. ಪೊಲೀಸರ ದಬ್ಬಾಳಿಕೆ ಉಗ್ರರೂಪ ತಾಳಿತು. ಹಿಚಕಡ ಊರಿನ ಮೇಲೆ ಎಡಬಿಡದೆ ದಾಳಿ ಮಾಡಿ ನೂರಾರು ಜನರನ್ನು ಬಂಧಿಸಿ ಜೈಲಿಗೆ ಒಯ್ದರು, ಅನೇಕರಿಗೆ ಚಿತ್ರಹಿಂಸೆ ನೀಡಿದರು. ಈ ಸಂಬಂಧ ಹಿಚಕಡ ಊರಿನ ಮೇಲೆ ನೂರಕ್ಕಿಂತ ಹೆಚ್ಚು ಸಲ ದಾಳಿ ಮಾಡಿದರು. ಭೂಗತರಾದ ಕುಟುಂಬಗಳಿಗೆ ವಿಪರೀತ ಹಿಂಸೆ ಕೊಟ್ಟರು. ದಯಾನಂದ ಪ್ರಭು ಅವರ ತಂದೆಯವರನ್ನು ಬಂಧಿಸಿ ಜೈಲಿಗೆ ಒಯ್ದರು, ಪುಂಡುಗಂದಾಯ ಹೇರಿದರು. ಆದರೆ ಯಾರೊಬ್ಬರೂ ಬಾಯಿ ಬಿಡಲಿಲ್ಲ, ಬೇಕಾದವರು ಕೈಗೆ ಸಿಗಲಿಲ್ಲ, ಬಂದೂಕುಗಳ ಪತ್ತೆಯೂ ಆಗಲಿಲ್ಲ. ದಕ್ಷ ಅಧಿಕಾರಿ ಎಂದು ಹೆಸರಾದ ನಾನಾವತಿ ಸಾಹೇಬರು ಭೂಗತರನ್ನು ಹಿಡಿಯಲು ಶತಪ್ರಯತ್ನ ಮಾಡಿದರೂ ಫಲ ದೊರೆಯಲಿಲ್ಲ. ಈ ಘಟನೆ ಚಳವಳಿಕಾರರ ಸಾಹಸದ ಪರೀಕ್ಷೆಯ ಪರಾಕಾಷ್ಠೆಯಾಗಿತ್ತು. ಪೊಲೀಸರು ತೀವ್ರ ದಬ್ಬಾಳಿಕೆ ನಡೆಸಿ ಅಮಾನುಷವಾಗಿ ವರ್ತಿಸಿದರು. ಅಂತೂ ಕೊನೆಗೆ ೫–೬ ತಿಂಗಳು ಕಳೆದ ಮೇಲೆ ನಾಲ್ಕು ಜನ ಭೂಗತರನ್ನು ಹಿಡಿಯುವಲ್ಲಿ ಯಶಸ್ವಿಯಾದರು. ಆದರೆ ಹಿಚಕಡ ಬೀರಣ್ಣ



ನಾಯಕ, ದಯಾನಂದ ಪ್ರಭು, ಸಗಡಗೇರಿ ವೆಂಕಟರಮಣ ನಾಯಕ ಈ ಮೂವರು ಮಾತ್ರ ಕೊನೆಯವರೆಗೂ ಭೂಗತರಾಗಿಯೇ ಉಳಿದು ತಪ್ಪಿಸಿಕೊಂಡರು.

ಈ ರೋಮಾಂಚಕಾರಿ ಸಾಹಸದ ಘಟನೆಯಲ್ಲಿ ಅಂಕೋಲಾ ತಾಲ್ಲೂಕಿನ ನಾಡವರ ಹಳ್ಳಿಗಳು ಸಾಮೂಹಿಕವಾಗಿ ಭಾಗವಹಿಸಿದವು ಹಾಗೂ ಇತರ ಹಳ್ಳಿಗಳ ಕೆಲವರು ಭಾಗವಹಿಸಿದರು, ಹಾಲಕ್ಕಿ ಗೌಡರ ಹಳ್ಳಿಯಾದ ಉಳುವರೆಯವರು ನಾಡವರ ಜೊತೆ ಸಕ್ರಿಯವಾಗಿ ಪಾಲ್ಗೊಂಡಿದ್ದರು. ಭೂಗತರಾಗಿ ಉಳಿದುಕೊಂಡು ಉಳುವರೆಯ ಹಾಲಕ್ಕಿ ಗೌಡರಿಗೆ ಚಳವಳಿಯ ಬಗ್ಗೆ ತಿಳಿಸಿ ಹೇಳಿ ಅವರಿಗೆ ಚಳವಳಿಯಲ್ಲಿ ಭಾಗವಹಿಸಲು ಪ್ರೋತ್ಸಾಹ ನೀಡಿ ಹುರಿದುಂಬಿಸಿದ ಅಂಕೋಲೆಯ ಹರಿರವಳು ನಾಯಕರನ್ನು ಮರೆಯಲಾಗದು. ಚಲೇಜಾವ್ ಚಳವಳಿಯಲ್ಲಿ ಪಾಲ್ಗೊಂಡು ಚಳವಳಿಕಾರರನ್ನು ಪ್ರೋತ್ಸಾಹಿಸಿದ ಶ್ರೀ ಶಂಕರ್ ಡಿ ದೇಸಾಯಿ ಮಾಸ್ತರ (ದಿನಕರ ದೇಸಾಯಿಯವರ ಅಣ್ಣ), ಬಿಕ್ಕು ರಾಮ ಮಹಾಲೆ, ಪುಂಡಲೀಕ್ ಮಹಾಲೆ ಮುಂತಾದವರು ಚಳವಳಿಯಲ್ಲಿ ಭಾಗವಹಿಸಿ ಯಶಸ್ಸಿಗೆ ಕಾರಣರಾದರು. ಬೆಟ್ಟದ ಸೀಮೆಯ ಊರುಗಳ ವಾಸರೆಯ ಬೀರಣ್ಣ ನಾಯಕ ಹಾಗೂ ಶಿರಗುಂಜಿ ಸಾತು ನಾಯಕ ಇವರು ಇಡೀ ಹೋರಾಟದ ಉದ್ದಕ್ಕೂ ತೋರಿದ ಧೈರ್ಯ ಸಾಹಸಗಳನ್ನು ಮರೆಯಲಾಗದು.

ಚಲೇಜಾವ್ ಚಳುವಳಿಯ ಕೇಂದ್ರವಾದ ಹಿಚಕಡ ಊರಿನ ಹಾಗೂ ಜನರ ಕುರಿತು ದಯಾನಂದ ಪ್ರಭು ಹೇಳಿದ ಮಾತುಗಳು ಗಮನಾರ್ಹವಾಗಿವೆ.

"ಯುದ್ಧೋತ್ಸಾಹವು ನಾಡವರ ಎದ್ದು ಕಾಣುವ ಗುಣ. ಪ್ರಾಚೀನ ಕಾಲದ ಸ್ತ್ರೀಯರಂತೆ ಅವರ ಸ್ತ್ರೀಯರು, ಮಕ್ಕಳು ಸಹ ಜನ್ಮಜಾತವೆನಿಸುವಂತಹ ದೇಶಭಕ್ತಿಯ ಭಾವವನ್ನು ಪ್ರದರ್ಶಿಸಿದರು. ಹಿಚಕಡ ಗ್ರಾಮವು ಚಳವಳಿಯ ಕಾಲಕ್ಕೆ ಕನಿಷ್ಟ ೪೦೦ ಸಲವಾದರೂ ಪೋಲೀಸರ ದಾಳಿಗೆ ತುತ್ತಾಗಿರಬೇಕು. ಆದರೂ ಸ್ವಲ್ಪವೂ ಜಗ್ಗದೆ, ಈ ಕೆಚ್ಚೆದೆಯ ಬಂಟರ ಯೋಧ ಗುಣ ನಮ್ಮಲ್ಲಿಲ್ಲದಿದ್ದರು, ನಾನು ಹೊರಗಿನವನಾದರು ನಾನು ಅವರ ಜೊತೆ

ನಾಡವರವನೇ ಆದೆ. ನಾಡವರ ಹಳ್ಳಿಗಳ ಪ್ರತಿಯೊಂದು ಮನೆಯಲ್ಲಿಯೂ ಒಬ್ಬರಿಗಿಂತ ಹೆಚ್ಚು ಸ್ವಾತಂತ್ರ್ಯ ಯೋಧರಿರುವುದು ಹೆಮ್ಮೆಯ ಸಂಗತಿಯಾಗಿದೆ. ಈ ಚಳವಳಿ ಸಮೂಹ ಶಕ್ತಿಯ ಪವಾಡ, ಇದರ ಯಶಸ್ಸು ಸಾಮೂಹಿಕವಾದುದು, ಅವರಿವರ ಹೆಸರು ಮುಖ್ಯವಲ್ಲ" (ಭೂಗತನ ನೆನಪು– ದಯಾನಂದ ಪ್ರಭು)

**ಸ್ವಾತಂತ್ರ್ಯ ಸಂಗ್ರಾಮದ ಕೆಲವು ಸಾಹಸ ಹಾಗೂ ಸ್ವಾರಸ್ಯಪೂರ್ಣ ಘಟನೆಗಳು:**

ಯುದ್ಧದ ವಾರ್ತೆ ರಮ್ಯವಾಗಿರುವಂತೆ ಸ್ವಾತಂತ್ರ್ಯ ಸಂಗ್ರಾಮದ ನೆನಪುಗಳು ಕೂಡ ರೋಮಾಂಚನಕಾರಿಯಾದವುಗಳಾಗಿವೆ. ಯಕ್ಷಗಾನ ಪ್ರಿಯರಿಗೆ ಚೆಂಡೆಯ ಸಪ್ಪಳ ಕೇಳುತ್ತಿದ್ದಂತೆ ನಿಂತಲ್ಲಿಯೇ ಕಾಲು ಕುಣಿಯುವ ಹಾಗೆ, ಸ್ವಾತಂತ್ರ್ಯ ಸಂಗ್ರಾಮ ಎಂಬ ಶಬ್ದ ಕೇಳುತ್ತಲೆ ಕಳೆದುಹೋದ ಪ್ರಾಯ ಮರಳಿ ಬಂದಂತೆ ನರಸತ್ತ ಮುದುಕರು ಕೂಡ ಉತ್ಸಾಹಿತರಾಗಿ ಉದ್ವೇಗಗೊಂಡು ತಮ್ಮ ನೆನಪುಗಳನ್ನು ಕೆದಕಿಕೊಳ್ಳುತ್ತಾ ಪರವಶರಾಗುತ್ತಿದ್ದರು. ಅವರ ಯೋಧ ಗುಣಕ್ಕಿನ್ನೂ ಮುಪ್ಪು ಆವರಿಸಿರಲಿಲ್ಲ. ಸಂದರ್ಭ ಬಂದರೆ ಮತ್ತೆ ಹೋರಾಡುವೆವು ಎಂದು ಉಮೇದು ಪಡುವ ಕೆಲವು ಯೋಧರು ಇನ್ನೂ ಬದುಕುಳಿದಿದ್ದಾರೆಂದು ಕೇಳಿದರೆ ಮೈನವಿರೇಳಿಸುವ, ಮೈ ಜುಮ್ಮೆನ್ನುವ ಘಟನೆಗಳಿಗೆ ಕೊರತೆಯಿಲ್ಲ.

**ಧೀರ ಸತ್ಯಾಗ್ರಹಿಗಳು :**

೧೯೩೦ ರಲ್ಲಿ ಜಂಗಲ್ ಸತ್ಯಾಗ್ರಹದ ಕಾಲಕ್ಕೆ (೨೮–೮–೧೯೩೦) ನಡೆದ ಒಂದು ಘಟನೆ ಸತ್ಯಾಗ್ರಹಿಗಳ ಧೀರತನಕ್ಕೆ ಸಾಕ್ಷಿಯಾಗಿದೆ.

ಅನೇಕ ಸ್ತ್ರೀಯರೂ, ಬಹುಸಂಖ್ಯೆಯಲ್ಲಿ ನಾಡವರೂ ಹಾಗೂ ಇತರರೂ ಇದ್ದ ಒಂದು ಭಾರಿ ಮೆರವಣಿಗೆಯು ಸತ್ಯಾಗ್ರಹಕ್ಕೆ ಹೊರಟಿತ್ತು. ಪೊಲೀಸರು ಮೆರವಣಿಗೆಯನ್ನು (ಅಂಕೋಲೆಯ) ಇಟ್ಟಗಟ್ಟದ ಹತ್ತಿರ ತಡೆದು ಚೆದುರಲು ಆಜ್ಞೆ ನೀಡಿದರು. ಜನ ಚೆದುರಲಿಲ್ಲ. ಆಗಿನ ಜಿಲ್ಲಾಧಿಕಾರಿಯಾಗಿದ್ದ ಆಂಗ್ಲನು ಅಲ್ಲೇ ಇದ್ದು ಗುಂಡು ಹಾರಿಸಲು ಪೊಲೀಸ್ ಅಧಿಕಾರಿಗಳಿಗೆ ಆಜ್ಞೆ ನೀಡಿದನು. ಈಗ ಗುಂಡು ಹಾರಿಸುವರೆಂಬ ವಾರ್ತೆ ಸತ್ಯಾಗ್ರಹಿಗಳಲ್ಲಿ ಹರಡಿತು. ಆದರೆ ಎಲ್ಲರೂ ಸ್ಥಳದಲ್ಲೇ ಕೂತುಬಿಟ್ಟರು. ಅನೇಕ ಗಂಟೆಗಳ ಕಾಲ ಪ್ರಾಣವನ್ನು



ಲೆಕ್ಕಿಸದೆ ಸತ್ಯಾಗ್ರಹಿಗಳು ಕದಲದೇ ಕೂತಿದ್ದರು. ಸುದೈವದಿಂದ ಗುಂಡುಹಾರಿಸುವ ಆಜ್ಞೆಯನ್ನು ಬರೆದು ಕೊಡಬೇಕೆಂದು ಐರಿಷ್ಮನ್ ಡಿ.ಎಸ್.ಪಿ ಹೇಳಿದನಂತೆ. ಆದರೆ ಜಿಲ್ಲಾಧಿಕಾರಿ ಹಾಗೆ ಬರೆದು ಕೊಡಲಿಲ್ಲ. ಆದ್ದರಿಂದ ಗುಂಡು ಹಾರಿಸಲಿಲ್ಲ. ಆಗಬೇಕಾದ ದುರಂತ ತಪ್ಪಿತು. ಆದರೆ ಸತ್ಯಾಗ್ರಹಿಗಳ ಅನುಪಮ ಧೈರ್ಯ ಹಾಗೂ ದೇಶಾಭಿಮಾನವನ್ನು ಮೆಚ್ಚಿ ತಲೆದೂಗಲೇಬೇಕು. ಅಂದು ಸ್ವಾತಂತ್ರ್ಯಕ್ಕಾಗಿ ಪ್ರಾಣತ್ಯಾಗಕ್ಕೂ ಅವರು ಸಿದ್ಧರಾಗಿಬಿಟ್ಟಿದ್ದರು.

**ಪೊಲೀಸರ ಶಿಬಿರವನ್ನು ಕೀಳಿಸಿದ್ದು :**

ಚಳವಳಿಗಾರರ ಚಟುವಟಿಕೆಗಳು ಹೆಚ್ಚುತ್ತಾ ಹೋದುದರಿಂದ ಪೊಲೀಸರು ಮುಖ್ಯ ಹಳ್ಳಿಗಳಲ್ಲಿ ಶಿಬಿರಗಳನ್ನು ಇಟ್ಟಿದ್ದರು. ಕಾರ್ಯಕರ್ತರಿಗೆ ಓಡಾಡುವುದು ಕಠಿಣವಾಯಿತು. ಮಧ್ಯವರ್ತಿ ಹಳ್ಳಿಯಾದ ಕಣಗಿಲದಲ್ಲಿ ಪೊಲೀಸರ ಶಿಬಿರವಿತ್ತು. ಅಲ್ಲಿ ಕಾವಲು ಭದ್ರವಾಗಿತ್ತು. ಅದು ಚಳವಳಿಗಾರರು ಹಳ್ಳಿಯಿಂದ ಹಳ್ಳಿಗೆ ಓಡಾಡುವ ದಾರಿಯಲ್ಲಿತ್ತು. ಆದುದರಿಂದ ಆ ಶಿಬಿರವನ್ನು ಅಲ್ಲಿಂದ ಕೀಳಿಸುವುದು ಅವಶ್ಯವಿತ್ತು. ಉಪಾಯದಿಂದ ಪೊಲೀಸರನ್ನು ಅಲ್ಲಿಂದ ಓಡಿಸಲು ಉತ್ಸಾಹಿ ತರುಣರು ಹಂಚಿಕೆ ಹೂಡಿದರು. ಈ ಹಂಚಿಕೆಯಲ್ಲಿ ಕಣಗಿಲ ಹಾಸ್ಯಗಾರ ಹಮ್ಮಣ್ಣ ನಾಯಕರದೇ ಪ್ರಧಾನ ಪಾತ್ರ. ಇವರು ಪೊಲೀಸರನ್ನು ಕಾಡಿಸಿದಷ್ಟು ಬೇರೆ ಯಾರೂ ಕಾಡಲಿಲ್ಲ. 'ಕೃಷ್ಣ ಲೀಲೆ' ಎಂಬಂತೆ ಈ ಹಾಸ್ಯಗಾರ ಹಮ್ಮಣ್ಣನ ಚಳವಳಿ ಕಾಲದ ಲೀಲೆಗಳಲ್ಲಿ ಕಣಗಿಲದ ಪೊಲೀಸ್ ಶಿಬಿರವನ್ನು ಕೀಳಿಸಿದ ಘಟನೆ ಸ್ವಾರಸ್ಯಕರವಾಗಿದೆ.

ಆಗ ಸುಗ್ಗಿ ಹಬ್ಬದ ಸಮಯವಾಗಿತ್ತು. ಹೋಳಿ ಹುಣ್ಣಿಮೆಯ ದಿನ ಕರಿ ದೇವರೆಂಬ ದೇವರ ಕಲಶ ಮಾಡಿ ಮೆರವಣಿಗೆ ಹೊರಡಿಸುವ ರೂಢಿ ಇಲ್ಲಿಯ ಹಾಲಕ್ಕಿ ಒಕ್ಕಲು, ಖಾರ್ವಿ ಮುಂತಾದ ಸಮಾಜದಲ್ಲಿದೆ. ಅದೇ ದೇವರ ಕಲಶವನ್ನು ಹೊತ್ತು ಮೆರವಣಿಗೆ ಮಾಡುವ ಪದ್ಧತಿ ಕಣಗಿಲದಲ್ಲಿಯೂ ಉಂಟು (ಇಂದಿಗೂ ಈ ಪದ್ಧತಿ ರೂಢಿಯಲ್ಲಿದೆ). ಸುತ್ತಮುತ್ತಲಿನ ಹಳ್ಳಿಗಳ ಹೆಂಗಸರು, ಗಂಡಸರು, ಮಕ್ಕಳು ಹಣ್ಣು ಕಾಯಿ ಹಿಡಿದುಕೊಂಡು ಮೆರವಣಿಗೆಯಲ್ಲಿ ಕೂಡಿಕೊಳ್ಳಬೇಕು. ಮೆರವಣಿಗೆಯು ನೇರವಾಗಿ ಪೊಲೀಸ್ ಶಿಬಿರವನ್ನು (Camp) ಹಾದು ಕೂಡಲೇ ಕ್ಯಾಂಪನ್ನು (ಶಿಬಿರವನ್ನು)

ತೆಗೆಯಬೇಕೆಂದು ದೇವರನ್ನು ಹೊತ್ತವನು ಹೇಳಿ ಬೆದರಿಸಬೇಕು ಮುಂತಾಗಿ ವಿಚಾರಿಸಿ ಯೋಜನೆ ಮಾಡಿಕೊಂಡು ಅದರಂತೆ ಕಲಶವು ಸಿದ್ಧವಾಗಿ, ವಾದ್ಯ ಘೋಷಗಳೊಂದಿಗೆ ಮೆರವಣಿಗೆ ಹೊರಟು ಪೊಲೀಸ್ ಕ್ಯಾಂಪಿನ ಎದುರಿಗೆ ಬಂದು ನಿಂತಿತು. ಕಲಶವನ್ನು ವಾರಂಟಿದ್ದ ಹಾಸ್ಯಗಾರ ಹಮ್ಮಣ್ಣ ನಾಯಕನೇ ಹೊತ್ತಿದ್ದನು. ಮೆರವಣಿಗೆ ಪೊಲೀಸ್ ಶಿಬಿರದ ಹತ್ತಿರ ಬರುತ್ತಿದ್ದಂತೆ ಕಲಶಕ್ಕೆ ಭಾರ ಬಂತು (ದೈವ ಆವಾಹನೆ ಆಯಿತು). ಕಳಸ ಹೊತ್ತವನು ಮೈಮುರಿದನು, ದೈವ ಆವಾಹನೆಯಾದಂತೆ ನಟಿಸಿ ಉರಿದು ಕುಣಿದನು, ಆರ್ಭಟಿಸಿದನು. "ನನ್ನ ದಾರಿಯಲ್ಲಿ! ನನ್ನ ಈ ಹದ್ದಿನಲ್ಲಿ! ನನ್ನ ನಡೆಯಲ್ಲಿ! ಈ ರೀತಿ ಆತಂಕ ಪಡಿಸಿ ಬೀಡು ಬಿಟ್ಟವರು ಎಲ್ಲಿಯವರು? ಈಗಿಂದೀಗ ನನ್ನ ಬಂಟರಿಗೆ ಹೇಳಿ ಅವರ ಕುಲವನ್ನೇ ನಾಶ ಮಾಡಿ ಬಿಡುವೆನು. ಯಾವ ನರಕುರಿಯು ಹೀಗೆ ಮಾಡಿದನು? ಇತ್ಯಾದಿಯಾಗಿ ಆರ್ಭಟಿಸಿದನು. ಪೊಲೀಸರು ಹೌಹಾರಿ ಹೋದರು. ಅವರೂ ನಮ್ಮವರೇ ಅಲ್ಲವೇ? ದೇವರ ಮುಂದೆ ಅಡ್ಡಬಿದ್ದು ಬೇಡಿಕೊಂಡರು. ಸುಲಿಗೆಯಿಂದ ತಂದ ತೆಂಗಿನಕಾಯಿ ಕೊಟ್ಟು ಕ್ಷಮೆ ಬೇಡಿದರು. ಆಗ ದೇವರು ಅಭಯ ವಚನ ಕೊಟ್ಟು "ಈಗಿಂದೀಗ ಕ್ಯಾಂಪು ಕಿತ್ತು ನನ್ನ ಗ್ರಾಮವನ್ನು ಬಿಡಬೇಕು, ಇಲ್ಲವಾದರೆ ಅದರ ಪರಿಣಾಮವನ್ನು ನೀವು ಭೋಗಿಸಬೇಕಾಗುತ್ತದೆ, ನನ್ನ ಬಂಟರಿಗೆ ಈಗಲೇ ತಾಕೀತು ಕೊಟ್ಟೇನು" ಎಂದು ಗದರಿಸಿತು. ಹಾಗೆಯೇ ಮಾಡುತ್ತೇವೆ ಎಂದು ಬೇಡಿಕೊಂಡು ಆಗಲೇ ಕ್ಯಾಂಪು ಕಿತ್ತು ದೇವರ ಮೆರವಣಿಗೆಗೆ ದಾರಿಮಾಡಿಕೊಟ್ಟರು. ಮೆರವಣಿಗೆ ನಿರಾತಂಕವಾಗಿ ಮುಂದೆ ಸಾಗಿತು. ಆದರೆ ಪೊಲೀಸರಿಗೆ ಆ ಗ್ರಾಮ ಬಿಡಲು ಅಧಿಕಾರಿಗಳ ಅಪ್ಪಣೆ ಇದ್ದಿಲ್ಲ, ಅಲ್ಲಿ ಉಳಿಯುವ ಧೈರ್ಯವೂ ಇದ್ದಿಲ್ಲ. ರಾತ್ರಿಯಾಯಿತು, ಪೊಲೀಸರಿಗೆ ನಿದ್ರೆ ಹತ್ತಲಿಲ್ಲ, ಕಣಗಿಲದ ತರುಣರು ಹಾಸ್ಯಗಾರ ಹಮ್ಮಣ್ಣ ನಾಯಕನ ನೇತೃತ್ವದಲ್ಲಿ ಮಧ್ಯರಾತ್ರಿಯ ಹೊತ್ತಿಗೆ ಭೂತಗಳ ಸೋಗಿನಲ್ಲಿ ಅನೇಕ ಚೇಷ್ಟೆಗಳನ್ನು ಮಾಡಿದರು. ಗಿಡವನ್ನು ಅಲುಗಿಸುವುದು, ಮಣ್ಣು ಹಾರಿಸುವುದು, ಅಸ್ಪಷ್ಟವಾಗಿ ಗುಣು–ಗುಣು ಶಬ್ದ ಮಾಡುವುದು ಇತ್ಯಾದಿಯಾಗಿ ಭೂತಚೇಷ್ಟೆ ಮಾಡಿದರು. ಪೊಲೀಸರು ಹೆದರಿ ಕಂಗಾಲಾದರು. ದೇವರೇ ನಮ್ಮಿಂದ ಸರ್ವಾಪರಾಧವಾಯಿತು, ನಾವು ಬೆಳಗಾದ ಕೂಡಲೇ ಇಲ್ಲಿಂದ ಹೊರಟು ಹೋಗುವೆವು, ನಮ್ಮ ಅಪರಾಧವನ್ನು ಕ್ಷಮಿಸಬೇಕು, ನಿನ್ನ ಪಾದಕ್ಕೆ ಬಿದ್ದು ಬೇಡಿಕೊಳ್ಳುತ್ತೇವೆ ಎಂದು ಬೇಡಿಕೊಂಡರು. ಬೆಳಗಾಗುವತನಕ ಜಾಗರಣೆಯಲ್ಲಿ ಕಳೆದರು. ಅದೇ ರಾತ್ರಿ ಒಬ್ಬ ಪೊಲೀಸನಿಗೆ ಭಯಂಕರ ಜ್ವರ ಬಂತು. ಅವನು ಬಡಬಡಿಸಹತ್ತಿದನು. ಅವನಿಗೆ ಬರೀ ಭೂತಗಳೇ ಕಾಣುತ್ತಿದ್ದವು. ಬೆಳಗಾದ ಮೇಲೆ ಅವನನ್ನು ಊರಿಗೆ ಸಾಗಿಸಿದರು, ಮುಂದೆ ಅವನು ಅದೇ ಜ್ವರದಿಂದ ತೀರಿಕೊಂಡನು. ಉಳಿದ ಪೊಲೀಸರು ಅಧಿಕಾರಿಗಳ ಅಪ್ಪಣೆ ಪಡೆದು ಅಲ್ಲಿಂದ ಕ್ಯಾಂಪ್ ಕಿತ್ತು ಹಿಚಕಡಕ್ಕೆ ಒಯ್ದು ಅಲ್ಲಿಯೂ ಜನರ ಹೇಳಿಕೆ ಪ್ರಕಾರ ದೇವರ ನಡೆ ತಪ್ಪಿಸಿ ದೂರ ಬಯಲಿನಲ್ಲಿ ಶಿಬಿರ ನಿರ್ಮಿಸಿ ಉಳಿದರು.



## ಹುಲಿಗಳ ಸಂಗಡ ಚಳಿ ಕಾಯಿಸಿದ್ದು

ಚಳವಳಿಗಾರರು ಗುಪ್ತ ಶಿಬಿರಗಳಲ್ಲಿ ಅಡಗಿಕೊಂಡಿರುತ್ತಿದ್ದರು. ಈ ಗುಪ್ತ ಶಿಬಿರಗಳು ಅಡವಿಗಳಲ್ಲಿಯೇ ಇರುತ್ತಿದ್ದವು. ಅಡವಿಯಲ್ಲಿ ಹುಲಿ, ಕರಡಿ, ಹಾವು ಮುಂತಾದವುಗಳ ಅಂಜಿಕೆಯನ್ನು ತೊರೆದು ಇರಬೇಕಾಗುತ್ತಿತ್ತು. ಎಲ್ಲೆಂದರಲ್ಲಿ, ಪ್ರಸಂಗ ಬಂದರೆ ಸ್ಮಶಾನದಲ್ಲಿಯೂ ಮಲಗಿ ನಿದ್ರೆ ಮಾಡಬೇಕಾಗುತ್ತಿತ್ತು. ಅಡವಿಯಲ್ಲಿ ಚಳಿಯನ್ನು ತಡೆದುಕೊಳ್ಳಲು ಬೆಂಕಿಮಾಡಿಕೊಂಡು ಸುತ್ತಲೂ ಮಲಗುತ್ತಿದ್ದರು. ಒಮ್ಮೆ ಹೀಗೆ ತಳಗದ್ದೆ ಬೆಟ್ಟದಲ್ಲಿ ಭಾವಿಕೇರಿ ರಾಮನಾಯಕ, ವಾಸ್ರೆ ಸುಬ್ರಾಯ ನಾಯಕ, ಕಣಗಿಲ ಹಾಸ್ಯಗಾರ ಹಮ್ಮಣ್ಣ ನಾಯಕ, ಕಣಗಿಲ ನಾರಾಯಣ ರಾಮ ನಾಯಕ, ಸೂರ್ವೆಯ ಗುತ್ತಿಕೇರಿ ಸಾಂತು ನಾಯಕ ಮೊದಲಾದವರು ರಾತ್ರಿ ಚಳಿ ಕಾಯಿಸುತ್ತ ಮಲಗಿದ್ದರು. ಇವರಿಗೆ ನಿದ್ದೆ ಬಿದ್ದ ಸಮಯದಲ್ಲಿ ಭಯಂಕರವಾದ ಎರಡು ಹುಲಿಗಳು ಚಳಿ ಕಾಯಿಸುತ್ತ ಕಣ್ಣು ಮುಚ್ಚಿ ಕುಳಿತಿದ್ದವು. ಹೇಗೋ ಏಕೋ ಮಧ್ಯದಲ್ಲಿ ಭಾವಿಕೇರಿ ರಾಮ ನಾಯಕ, ವಾಸ್ರೆ ಸುಬ್ರಾಯ ನಾಯಕರಿಗೆ ಎಚ್ಚರವಾಯಿತು. ಒಮ್ಮೆ ಅವರು ಹೌಹಾರಿದರು. ಕಂಬಳಿಯ ಮುಸುಕಿನಲ್ಲಿ ಸ್ವಲ್ಪವೂ ಅಲುಗಾಡದೆ ಕೈಯಲ್ಲಿ ಜೀವ ಹಿಡಿದುಕೊಂಡು ಅರೆಗಣ್ಣಿನಿಂದ ಹುಲಿಯನ್ನೇ ನೋಡುತ್ತ ಮಲಗಿದರು. ಯಾರೂ ಮಾತನಾಡುವ ಹಾಗಿಲ್ಲ. ಅವರ ಗಂಟಲೇ ಒಣಗಿಹೋಗಿತ್ತು. ಅವರಿಗೆ ಆ ಕ್ಷಣ ಅದ್ಹೇಗೆ ಉಪಾಯ ಹೊಳೆಯಿತೋ ಅಥವಾ ಯಾವುದೋ ಮಾಯಕದಲ್ಲಿ, ಅವರ ಕಾಲಬುಡದಲ್ಲಿದ್ದ ಖಾಲಿ ಡಬ್ಬಿಗಳನ್ನು, ತಟ್ಟನೆ ಕಾಲಿನಿಂದ ತುಳಿದು ಉರುಳಿಸಿಬಿಟ್ಟರು. ಆ

ಡಬ್ಬಿಗಳ ಢಣ ಢಣ ಸಪ್ಪಳ ಕೇಳಿ ಹುಲಿಗಳು ಏನೆಂದು ತಿಳಿಯದೆ ಓಡಿ ಹೋದವು. ಇವರಿಗೆ ಹೋದ ಜೀವ ಮರಳಿಬಂದಂತಾಯಿತು.

### ತೆಂಗಿನಮರವೇರಿ ಪಾರಾದ ಘಟನೆ

೧೯೪೨ರ ಚಲೇಜಾವ್ ಚಳವಳಿಯಲ್ಲಿ ಜೈಲಿಗೆ ಹೋಗದ ಹಾಗೂ ವಾರಂಟಿಲ್ಲದ ನಾಡವರ ಗಂಡಸರೇ ಇಲ್ಲವೆನ್ನಬಹುದು. ವಾರಂಟಿದ್ದವರು ಸಾಮಾನ್ಯವಾಗಿ ಇದ್ದಲ್ಲಿ ಇರುವುದಿಲ್ಲ. ಮೇಲಿಂದ ಮೇಲೆ ಸ್ಥಳವನ್ನು ಬದಲಾಯಿಸುತ್ತಿದ್ದರು. ಆದರೆ ಮಳೆಗಾಲದಲ್ಲಿ ಬೆಟ್ಟದ ಕಡೆಗೆ ಇರಲು ಸಾಧ್ಯವಾಗುತ್ತಿರಲಿಲ್ಲ, ಆಗ ಊರಿನ ಆಯಕಟ್ಟಿನ ಕೆಲವು ಮನೆಗಳನ್ನು ಆರಿಸಿಕೊಳ್ಳುತ್ತಿದ್ದರು. ಸೂರ್ವೆಯ ಬೀರಣ್ಣ, ಬೊಮ್ಮಯ್ಯ ನಾಯಕ ಮತ್ತು ಬೊಮ್ಮಯ್ಯ ರಾಮ ನಾಯಕರು ಸೂರ್ವೆ ಊರಿನ ಒಂದು ಮಗ್ಗುಲಿಗೆ ಇದ್ದ ರಾಕು ಬೊಮ್ಮಯ್ಯ ನಾಯಕ (ಚೀರಿಮನೆ) ಇವರ ಮನೆಯಲ್ಲಿ ತಾಯಿ ಸೇಮಕ್ಕ ಮತ್ತು ಅವಳ ಮಗ ರಾಕು ಇವರನ್ನು ಬಿಟ್ಟು ಬೇರೆ ಯಾರೂ ಜನರಿದ್ದಿಲ್ಲ. ಸೇಮಕ್ಕ ವಯಸ್ಸಾದವಳು. ಒಂದು ದಿನ ರಾತ್ರಿ ಸೇಮಕ್ಕ ಮನೆ ಹೊರಗೆ ಜಗುಲಿಯ ಮೇಲೆ ಹಾಗೂ ಒಳಗಡೆಯ ಕೋಣೆಯಲ್ಲಿ ಈ ವಾರಂಟ್ ಇದ್ದವರು ಮತ್ತು ಸೇಮಕ್ಕನ ಮಗ ರಾಕು ನಾಯಕ ಮಲಗಿದ್ದರು. ಪೊಲೀಸರು ಮುದುಕಿಯನ್ನು ಎಬ್ಬಿಸಿ ಒಳಗಡೆ ಯಾರ್‍ಯಾರು ಇದ್ದಾರೆಂದು ಕೇಳಿದರು. ತನ್ನ ಮಗ ಒಬ್ಬನೇ ಮಲಗಿದ್ದಾನೆ ಎಂದು ಹೇಳಿದಳು. ಪೋಲಿಸರು ಅವಳ ಮಾತನ್ನು ನಂಬದೆ ಮನೆಯನ್ನು ಶೋಧ ಮಾಡುವುದಾಗಿ ತಿಳಿಸಿದರು. ಮುದುಕಿಗೆ ಮನಸ್ಸಿನಲ್ಲಿ ಕಳವಳವಾದರೂ ತೋರಗೊಡದೆ ಧೈರ್ಯ ಮಾಡಿ ಮಗನನ್ನು ತಮ್ಮಾ ! ತಮ್ಮಾ ! ಎಂದು ಒದರಿದಳು. ಆಗಲೇ ಒಳಗಿದ್ದವರಿಗೆ ಪೊಲೀಸರು ಮುತ್ತಿಗೆ ಹಾಕಿದ್ದು ತಿಳಿಯಿತು. ಇನ್ನು ತಾವು ಪಾರಾಗಲು ಸಾಧ್ಯವಿಲ್ಲ, ದೇವರೇ ನೀನೆ ಗತಿ ಎಂದು ಮನಸ್ಸಿನಲ್ಲಿ ಹೇಳಿಕೊಂಡರಂತೆ. ತಕ್ಷಣ ಅವರಿಗೆ ಒಂದು ಉಪಾಯ ಹೊಳೆಯಿತು. ಆ ಮನೆಯ ಹುಲ್ಲಿನ ಮೇಲ್ಛಾವಣಿಯನ್ನು ತೂರಿಕೊಂಡೇ ಒಂದು ತೆಂಗಿನ ಮರವಿತ್ತು. ಅಟ್ಟ ಹತ್ತಿ ಅಲ್ಲಿಂದ ತೆಂಗಿನ ಮರ ಏರಿ ಪಾರಾಗಬಹುದೆಂದು ಪಕ್ಕನೆ ನಿರ್ಧರಿಸಿದರು. ತಾವು ಹಾಸಿಕೊಂಡ ಕಂಬಳಿಗಳನ್ನೆಲ್ಲ ಬಡ ಬಡ ತೆಗೆದು ಒಂದೇ ಹಾಸಿಗೆ ಮಾಡಿ ಹಾಸಿ ಅವರಿಬ್ಬರೂ ಮೇಲೇರಿ ತೆಂಗಿನಮರವನ್ನು ಹತ್ತಿಕೊಂಡರು, ಸೇಮಕ್ಕನ ಮಗ ರಾಕು ಎಷ್ಟು ಕರೆದರೂ ಎಚ್ಚರವಾಗದವನ ಹಾಗೆ ನಟಿಸಿ, ಅವರು ಮೇಲೇರಿ ತಪ್ಪಿಸಿಕೊಳ್ಳುವವರೆಗೆ ಹೇಗೂ ಸಮಯ ಕಳೆದನು. ಕೊನೆಗೆ ಪೊಲೀಸರೇ ಬಾಗಿಲು ಬಡಿಯಲು ಶುರು ಮಾಡಿದರು. ತುಂಬಾ ನಿದ್ದೆ ಬಂದವನಂತೆ ನಟಿಸಿ, 'ಚಿಮಣಿ ಎಲ್ಲಿಟ್ಟಿರುವೆ' ಎಂದು ತಾಯಿಯನ್ನು ಬಯ್ದಂತೆ ಮಾಡಿ ಕಣ್ಣೊರೆಸುತ್ತಾ ಕೋಣೆಯ ಬಾಗಿಲು ತೆರೆದನು. ಪೋಲಿಸರು ಕೋಣೆಗೆ ನುಗ್ಗಿದರು. ಅದು ಕೇವಲ ಎರಡು ಕೋಣೆಗಳ ಚಿಕ್ಕ ಹುಲ್ಲಿನ ಮನೆಯಾಗಿತ್ತು. ಪೊಲೀಸರಿಗೆ ತುಂಬಾ ನಿರಾಶೆಯಾಯಿತು. 'ರಾಕು' ನಾಯಕನ ನಟನೆ ಮಾತ್ರ ಪೋಲಿಸರನ್ನು ಮೋಸಗೊಳಿಸಿತ್ತು. ಪೋಲಿಸರು ಹಿಂತಿರುಗಿದರು. ಮರ ಏರಿದವರು ಕೆಳಗಿಳಿದರು. ಅಜ್ಜಿಗೂ ಹೋದ ಜೀವ ಮರಳಿ ಬಂದಂತಾಯಿತು. ತಮ್ಮ ಸಮಯ ಪ್ರಜ್ಞೆಗೆ ತಾವೇ ಬೆರಗಾಗಿ ನಕ್ಕು ನಲಿದರು. ಹೀಗೆ ಹಲವು ಬಾರಿ ಪೋಲಿಸರಿಂದ ತಪ್ಪಿಸಿಕೊಂಡ ಮೋಜಿನ ಪ್ರಸಂಗಗಳು ಬಹಳ ಇವೆ.

### ಮಾಮಲೇದಾರರ ಕುರ್ಚಿಯ ಆಕ್ರಮಣ :

ಪೊಲೀಸರ ಶಕ್ತಿ ಹರಿದು ಹಂಚಿ ಹೋಗುವಂತೆ ಮಾಡಲು ಬದುಕಿನ ಬೇರೆ ಬೇರೆ ಭಾಗಗಳಲ್ಲಿ ವಿವಿಧ ಪ್ರಕಾರದ ಸತ್ಯಾಗ್ರಹಗಳನ್ನು ನಡೆಸುತ್ತಿದ್ದರು. ಪೊಲೀಸರ ಗಮನವನ್ನು ಬೇರೆಡೆ ಸೆಳೆಯುವುದಕ್ಕಾಗಿ ಹಲವು ಸ್ವಾರಸ್ಯಕರ ಘಟನೆಗಳು ಆಗಾಗ ಸಂಭವಿಸುತ್ತಿದ್ದವು.

ಒಮ್ಮೆ ಅಂಕೋಲೆಯ ವಾಸುದೇವ ಬಿಕ್ಕು ಮಹಾಲೆಯವರು ತಾಲೂಕು ಕಚೇರಿಗೆ ಹೋಗಿ ಮಾಮಲೇದಾರರು ಇಲ್ಲದ ಸಮಯ ನೋಡಿ ಅವರ ಕುರ್ಚಿಯ ಮೇಲೆ ಕುಳಿತು "ಯಾವತ್ತೂ ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಿರುತ್ತೇನೆ" ಎಂದು ಹುಕುಂ ಬರೆದು ಜಾಹೀರು ಮಾಡಿದ ಸ್ವಾರಸ್ಯಕರ ಘಟನೆ ನಡೆದು ಅಧಿಕಾರಿಗಳಿಗೆ, ಪೊಲೀಸರಿಗೆ ಅಪಮಾನವಾಗುವ ಹಾಗೆ ಆಯಿತು. ಚಳವಳಿಗಾರರು ಎಷ್ಟು ಹೊತ್ತಿಗೆ ಏನು ಮಾಡುತ್ತಾರೆಂದು ಊಹಿಸುವುದೇ ಸರಕಾರಕ್ಕೆ ಕಷ್ಟವಾಗುವ ರೀತಿಯಲ್ಲಿ ಕಾರ್ಯಕ್ರಮಗಳು ನಡೆಯುತ್ತಿದ್ದವು.

### ಹಾಸ್ಯಗಾರ ಹಮ್ಮಣ್ಣನ ಕಚ್ಚೆ ಪೋಲಿಸರ ವಶಕ್ಕೆ

ಪೋಲಿಸರನ್ನು ಸತಾಯಿಸಿ ತಪ್ಪಿಸಿಕೊಳ್ಳುವ ವಿದ್ಯೆಯಲ್ಲಿ ಕಣಗಿಲ

ಹಾಸ್ಯಗಾರ ಹಮ್ಮಣ್ಣ ನಾಯಕನು ನಿಸ್ಸೀಮನಾಗಿದ್ದನು. ಒಮ್ಮೆ ಹಮ್ಮಣ್ಣ ನಾಯಕನು ವಾರಂಟಿದ್ದ ಸಮಯದಲ್ಲಿ, 'ದಂಡೆಭಾಗ'ದಿಂದ ತನ್ನ ಊರು ಕಣಗಿಲಕ್ಕೆ ಬರುತ್ತಿದನು. ಬರುವ ದಾರಿಯಲ್ಲಿ ಒಂದು ಸಣ್ಣ ಹಳ್ಳ ಸಿಗುತ್ತದೆ. ಅದಕ್ಕೆ ಗೋರು ಹಳ್ಳ ಎನ್ನುವರು. ಹಳ್ಳಕ್ಕೆ ಹಾಲಕ್ಕಿ ಗೌಡರು ಮೀನು ಹಿಡಿಯಲು ಬರುತ್ತಾರೆ. ಹಮ್ಮಣ್ಣ ನಾಯಕ ಹಳ್ಳದ ದಾರಿಯಲ್ಲಿ ಬರುತ್ತಿರುವಂತೆಯೇ ಆಕಸ್ಮಿಕವಾಗಿ ಪೋಲಿಸರು ಬಂದೇಬಿಟ್ಟರು. ಹಮ್ಮಣ್ಣ ನಾಯಕನು ಮಿಂಚಿನ ವೇಗದಿಂದ ತಲೆ ಓಡಿಸಿ ಅದೇ ಗೋರು ಹಳ್ಳಕ್ಕೆ ಇಳಿದು, ಮೈಗೆಲ್ಲಾ ಕೆಸರು ಬಳಿದುಕೊಂಡು, ಹಳ್ಳಕ್ಕೆ ಮೀನು ಹಿಡಿಯಲು ಬಂದ ಗೌಡನಂತೆ ನಟಿಸಿ, ಗೌಡರ ಆಡುಮಾತಿನ ಭಾಷೆಯಲ್ಲಿ ತನ್ನಷ್ಟಕ್ಕೆ ತಾನು "ಚತ್ ಮೀನು ಒಂದೂ ಸಿಕ್ಕಾಕಲ, ಎಲ್ಲ ಹೋಗ್ ಚತ್ತೊ ಏನೊ, ಹೀಂಗೆಲಾ ಹಿಡುಕ್ ಬಂದ್ರೆ ಚಿಕ್ಕವಾ" ಎಂದು ಅಪ್ರತ್ಯಕ್ಷವಾಗಿ ಪೋಲಿಸರನ್ನೇ ಅಣಕಿಸಿ ಮಾತಾಡಿಕೊಳ್ಳುತ್ತಿದ್ದವನನ್ನು, ಅವನು ನಿಜವಾದ ಗೌಡನೆಂದೇ ಭಾವಿಸಿ, ಏ ಗೌಡಾ! ಇಲ್ಯಾರಾದ್ರೂ ಓಡಿ ಹೋದರೇನೊ ಎಂದು ಕೇಳಿದರು, ಹೌದ್ರಾ "ಆ ಕಡೆ ಓಡ್ದಾ ಒಬ್ಬ" ಎಂದು ತನ್ನ ಊರಿನ ವಿರುದ್ಧ ದಿಕ್ಕು ತೋರಿಸಿ, ಅವರು ಮರೆಯಾದ ಮೇಲೆ ಗೋರು ಹಳ್ಳದಿಂದ ಎದ್ದು ಬಂದು ಪೊಲೀಸರಿಂದ ತಪ್ಪಿಸಿಕೊಂಡ ಘಟನೆ ಸ್ವಾರಸ್ಯಮಯವಾಗಿದೆ.

ಹಮ್ಮಣ್ಣ ನಾಯಕನ ಚೇಷ್ಟೆಗಳಿಗೆ ಕೊನೆ ಮೊದಲಿಲ್ಲ. ಇನ್ನೊಮ್ಮೆ ಹಮ್ಮಣ್ಣ ನಾಯಕ ಅವರ ಮನೆಯಲ್ಲಿಯೇ ಇದ್ದ ಸಮಯ ಸಾಧಿಸಿ, ಪೊಲೀಸರು ಮನೆಯ ಸುತ್ತ ಗೆರೆ ಹಾಕಿ ಬೆನ್ನಟ್ಟಿದರು. ಹಮ್ಮಣ್ಣ ನಾಯಕ ಎತ್ತರ ಪಾಗಾರ ಹಾರುವುದರಲ್ಲಿ ಪಳಗಿದವನಾಗಿದ್ದ. ಪೊಲೀಸರು ಬಂದೊಡನೆ ಅವರ ಮನೆಯ ಹಿಂಭಾಗದ ದಣಪೆಯಲ್ಲಿ ಓಡಿಹೋಗುವಾಗ ಪೊಲೀಸರ ಕೈಗೆ ಹಮ್ಮಣ್ಣ ನಾಯಕನ ಕಚ್ಚೆಯ ಕೆಳಭಾಗ ಅಕಸ್ಮಾತ್ ಸಿಕ್ಕಿಬಿಟ್ಟಿತು. ಆಗ ಹಮ್ಮಣ್ಣ ನಾಯಕನು ಅರೆಕ್ಷಣವೂ ತಡಮಾಡದೆ ಉಡಿದಾರಕ್ಕೆ ಸಿಕ್ಕಿಸಿದ ಕಚ್ಚೆಯ ಹಿಂಭಾಗವನ್ನು ತಾನೆ ಬಿಚ್ಚಿ ಹಾಕಿ ಬತ್ತಲೆಯಾಗಿಯೇ ಓಡಿ ಗಿಡಗಂಟಿಗಳ ಮರೆಯಲ್ಲಿ ತಪ್ಪಿಸಿಕೊಂಡನು. ಪೊಲೀಸರಿಗೆ ಹಮ್ಮಣ್ಣ ನಾಯಕ ಸಿಗದೆ ಅವನ ಕಚ್ಚೆ ಮಾತ್ರ ಸಿಕ್ಕಿತು. ಇದು ಊರಲ್ಲೆಲ್ಲಾ ಸುದ್ದಿಯಾಗಿ ಇಡಿ ಊರಿಗೆ ಊರೇ



ಹೊಟ್ಟೆ ತುಂಬ ನಕ್ಕಿತ್ತು. ಇಂಥ ಹೊಟ್ಟೆ ತುಂಬ ನಗೆ ಉಕ್ಕಿ ಬರುವ ಘಟನೆಗಳನ್ನು ಕೇಳುತ್ತ ಕುಳಿತರೆ ನಮ್ಮನ್ನೇ ನಾವು ಮರೆತುಬಿಡುತ್ತೇವೆ.

**ಪೋಲೀಸ್ ಸಾಹೇಬನನ್ನು ಅಟ್ಟಿದ್ದು :**

ಪೋಲಿಸ್ ಸಾಹೇಬನನ್ನು ಅಟ್ಟಿದ ಘಟನೆ ಹಿಚಕಡ ಊರಿನ ಜನರ ಅಸಾಧಾರಣ ಧೈರ್ಯಕ್ಕೆ ಸಾಕ್ಷಿಯಾಗಿದೆ.

ಉಳುವರೆಯ ಜಂಗಲ್ ಸುಟ್ಟ ನಂತರ ಹಳ್ಳಿಗಳಲ್ಲಿ ಪೋಲಿಸರ ದಬ್ಬಾಳಿಕೆಯೇ ನಡೆಯಿತು. ನೂರಾರು ತರುಣರನ್ನು ಹಿಡಿದು, ವಾರಂಟ್ ಇದ್ದವರ ಬಗ್ಗೆ ಮಾಹಿತಿ ಕೇಳಿ ಹಿಂಸಿಸಿದರು. ಹೆಂಗಸರನ್ನು ಇಡೀ ದಿನ ಬಂಧಿಸಿ ಇಟ್ಟರು. ಆದರೂ ಜನ ಹೆದರಲಿಲ್ಲ. ಇದೇ ಸಮಯಕ್ಕೆ ಡಿ.ಎಸ್.ಪಿ. ನಾನಾವತಿಯವರು ಗೋಕರ್ಣದ ಫೌಜುದಾರ ಮತ್ತು ಹೋಮ ಇನ್ಸ್‌ಪೆಕ್ಟರರ ಜೊತೆ ಉಳುವರೆಯಿಂದ ದೋಣಿಯ ಮೂಲಕ ಬಂದು ಹಿಚಕಡದಲ್ಲಿ ಇಳಿದರು. ಪೋಲಿಸರ ಹಿಂಸೆಗೆ, ಕಿರುಕುಳಕ್ಕೆ ರೋಸಿ ಸಿಟ್ಟಿಗೆದ್ದ ಹಿಚಕಡದ ಹುಡುಗರು ಡಬ್ಬಿಗೆ ಗಂಟೆ ಕಟ್ಟಿ ಬಾರಿಸಿ ಗದ್ದಲ ಎಬ್ಬಿಸಿ, ಜೈಕಾರ ಮಾಡಿದರು. ಅಪಮಾನಿತರಾದ ಈ ಅಧಿಕಾರಿಗಳು ಹುಡುಗರನ್ನು ಬೆನ್ನಟ್ಟಿ ಮನೆ ಮನೆಯನ್ನು ಹೊಕ್ಕು ಹೊಡೆದರು. ಈ ಘಟನೆಯೇ ಕಾರಣವಾಗಿ ಊರ ಹಿರಿಯರು ಸಿಟ್ಟಿಗೆದ್ದು ಗಂಡಸರು ಹೆಂಗಸರು ಕೂಡಿಯೇ ಪೋಲಿಸ್ ಸಾಹೇಬ "ಬದುಕಿದರೆ ಬೇಡಿಕೊಂಡು ತಿಂಬೆ" ಎಂದು ಹೆದರಿ ಕಂಗಾಲಾಗಿ ಓಡಿಹೋದುದನ್ನು ನೆನೆಸಿಕೊಂಡು ಹಿಚಕಡದ ಹಿರಿಯರು ಹೊಟ್ಟೆತುಂಬಿ ನಗುತ್ತಾರೆ.

(ವಿವರಗಳಿಗೆ 'ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹಿಚಕಡದ ಪಾತ್ರ' ಲೇಖನ ನೋಡಿ)

**ಟಪಾಲು ಕಸಿದದ್ದು :**

ಕೆಲವು ಪ್ರಮುಖ ಚಳವಳಿಗಾರರು ಕೂಡಿ ಹುಬ್ಬಳ್ಳಿಯಿಂದ ಮೋಟಾರು ಮುಖಾಂತರ ಬರುವ ಟಪಾಲನ್ನು ಕಸಿಯಬೇಕೆಂದು ನಿರ್ಧರಿಸಿದರು. ಯಲ್ಲಾಪುರ ಅಂಕೋಲಾ ಮಾರ್ಗ ಮಧ್ಯದಲ್ಲಿ ಹೊನ್ನಳ್ಳಿ ಎಂಬ ಊರು ಸಿಗುತ್ತದೆ. ಸುತ್ತ ಮುತ್ತಲೂ ಬೆಟ್ಟ, ಮಧ್ಯ ಮಾರ್ಗದಲ್ಲಿ ಬಸ್ಸನ್ನು ತಡೆಹಿಡಿದು

ಟಪಾಲು ಕಸಿಯುವ ಯೋಜನೆ. ಆಚೀಚೆ ಬಿದ್ದ ಮರಗಳನ್ನು ಒಟ್ಟುಗೂಡಿಸಿ ರಸ್ತೆಗೆ ತಡೆಯನ್ನೊಡ್ಡಲಾಯಿತು. ಜನರೆಲ್ಲ ಆಚೆ–ಈಚೆ ಅಡಗಿ ಕುಳಿತರು. ಬಸ್ಸೂ ಬಂದಿತು. ಒಂದು ಕ್ಷಣ ಬಸ್ಸು ನಿಂತಿತು. ಮರುಕ್ಷಣದಲ್ಲೇ ಕಣಗಿಲ ಹಮ್ಮಣ್ಣ ನಾಯಕರು ಬಸ್ಸಿನ ಮೇಲೆ ಏರಿಯೇಬಿಟ್ಟರು. ಆದರೆ ರಸ್ತೆಗೆ ಅಡೆ–ತಡೆ ಒಡ್ಡಿದ್ದು ಅಷ್ಟು ಸಮರ್ಪಕವಾಗಿರಲಿಲ್ಲ. ಬಸ್ಸಿನ ಚಾಲಕನು ಅಡೆ–ತಡೆಯನ್ನು ಹೇಗೋ ತಪ್ಪಿಸಿಕೊಂಡು ರಸ್ತೆಯ ಅಂಚಿನ ಕಾಲುವೆಯಲ್ಲಿಯೇ ಬಸ್ಸನ್ನು ಒಯ್ದೇ ಬಿಟ್ಟನು. ಹಮ್ಮಣ್ಣ ನಾಯಕರು ಬಸ್ಸಿನ ಟಾಪಿನ ಮೇಲೆಯೇ ಉಳಿದರು. ಉಳಿದ ಚಳವಳಿಗಾರರು ಗಾಬರಿಯಾದರೂ, ಬಸ್ಸಿನ ಹಿಂದೆಯೇ ದೌಡಾಯಿಸಿದರು. ಆದರೆ ಬಸ್ಸು ಕಣ್ಮರೆಯಾಯಿತು. ಇನ್ನೇನು ಮಾಡುವುದೆಂದು ವಿಚಾರ ಮಾಡುತ್ತಿರುವಾಗಲೇ ದೂರದಿಂದ ಕುಂಟುತ್ತಾ ಬರುವ ಹಮ್ಮಣ್ಣ ನಾಯಕರು ಕಂಡರು. ಓಡುತ್ತಿರುವ ಬಸ್ಸಿನಿಂದ ಜೀವದ ಹಂಗು ತೊರೆದು ಜಿಗಿದು ಬಂದ ಧೀರ! ಅವರ ಕೈಕಾಲಿಗೆ ಸ್ವಲ್ಪ ನೋವಾದರೂ ಪೋಲಿಸರ ಕೈಗೆ ಸಿಗದೆ ಪಾರಾಗಿ ಬಂದುದಕ್ಕೆ ಎಲ್ಲರಿಗೂ ಸಂತೋಷವಾಯಿತು. ಹೀಗಿತ್ತು ಚಳವಳಿಗಾರರ ಹುಮ್ಮಸ್ಸು.

**ಶಿಂಗಣಮಕ್ಕಿಯಲ್ಲಿ ತೀರ್ವೆ ವಸೂಲಿ :**

'ಶಿಂಗಣಮಕ್ಕಿ' ಅಂಕೋಲಾ ತಾಲ್ಲೂಕಿನ ಒಂದು ಪುಟ್ಟ ಹಳ್ಳಿ. ಕರಬಂದಿಯ ಕಾಲಕ್ಕೆ ದಿಟ್ಟತನದಿಂದ ಹೋರಾಡಿದ ಕೀರ್ತಿ ಆ ಊರಿನದು. ನಾಡವರ ಹಳ್ಳಿಗಳೆಲ್ಲವೂ ಕರಬಂದಿಯ ಗುಂಗಿನಲ್ಲಿ ಮುಳುಗಿದ್ದವು. ಸರಕಾರಕ್ಕೆ ತೀರ್ವೆಕೊಡಲು ಅವರು ಸರ್ವಥಾ ಒಪ್ಪಲಿಲ್ಲ. ಸರಕಾರದವರು ಪೊಲೀಸ್‌ಪಾರ್ಟಿ ಸಹಿತ ಹಳ್ಳಿಗಳಿಗೆ ಹೋಗಿ ತೀರ್ವೆಕೊಡಲು ಒತ್ತಾಯಿಸುತ್ತಿದ್ದರು. ಅಧಿಕಾರಿಗಳ ಒತ್ತಾಯಕ್ಕೆ ತೀರ ವಿರುದ್ಧವಾಗಿ ಜನರ ಪ್ರತಿಭಟನೆ, ಅಸಹಕಾರ, ಬಹಿಷ್ಕಾರ ತೀವ್ರತರವಾಗಿತ್ತು.

೧೯೩೧ರ ಫೆಬ್ರುವರಿ ೨೬ಕ್ಕೆ ಅಂಕೋಲೆಯ ಮಾಮಲೇದಾರರು ಶಿಂಗಣಮಕ್ಕಿಗೆ ತೀರ್ವೆ ವಸೂಲಿಗೆ ಹೋಗಿದ್ದರು. ಅವರ ಜೊತೆಯಲ್ಲಿ ಉಗ್ರಾಣಿಗಳು, ಶಾನುಭೋಗರು ಮತ್ತು ಆರು ಜನ ಪೋಲಿಸರು ಇದ್ದರು. ಮಾಮಲೇದಾರನಿಗೆ ಉಳಿದುಕೊಳ್ಳಲು ಊರಲ್ಲಿ ಸ್ಥಳ ಯಾರೂ ಕೊಡಲಿಲ್ಲ.



ಕೊನೆಗೆ ಆ ಊರಿನ ಶಾಲೆಯ ಶಿಕ್ಷಕರಿಗೆ ಹೇಳಿಕೊಂಡು ಶಾಲೆಯಲ್ಲಿ ಉಳಿದುಕೊಂಡರು. ಉಗ್ರಾಣಿ ಊರಲ್ಲೆಲ್ಲ ಅಡ್ಡಾಡಿ ರೈತರಿಗೆ ತೀರ್ವೆ ಕೊಡಲು ತಿಳಿಸಿ ಬಂದನು. ಆದರೆ ಯಾರೊಬ್ಬರೂ ಮಾಮಲೇದಾರರ ಹತ್ತಿರ ಸುಳಿಯಲಿಲ್ಲ. ಚಹ ಮಾಡಲು ಇಡೀ ಊರಲ್ಲಿ ಅವರಿಗೆ ಪಾತ್ರೆ ಸಿಗಲಿಲ್ಲ. ಅಂಗಡಿಕಾರರು ಸಕ್ಕರೆ ಕೊಡಲಿಲ್ಲ. ಕಬ್ಬು ಮಾರುವ ಗೌಡತಿಯು ಪೋಲಿಸರಿಗೆ ಕಬ್ಬು ಮಾರಿ ಕೊಡಲು ಒಪ್ಪಲಿಲ್ಲ.

ಮಾಮಲೇದಾರರು ಊರತುಂಬ ತಿರುಗಾಡಿದರು. "ತೀರ್ವೆ ಕೊಟ್ಟವರ ಮೇಲೆ ಬಹಿಷ್ಕಾರ ಹಾಕುವುದಿಲ್ಲವಾಗಿ ಡಾ. ಹರಡೀಕರರು ನನ್ನ ಮುಂದೆ ಹೇಳಿರುವರು, ತೀರ್ವೆ ಕೊಟ್ಟುಬಿಡಿರಿ, ನಾನಾದರೂ ಸ್ವರಾಜ್ಯವಾದಿಯೇ" ಎಂದು ಹೇಳಿದರು. ಆದರೂ ಒಬ್ಬರೂ ತೀರ್ವೆ ಕೊಡಲಿಲ್ಲ. ಮೇಲಾಗಿ ಮಾಮಲೇದಾರರಿಗೆ ಉಳಿದುಕೊಳ್ಳಲು ಶಾಲೆಯಲ್ಲಿ ಸ್ಥಳ ಕೊಟ್ಟ ಬಗ್ಗೆ ಶಾಲೆಯ ಶಿಕ್ಷಕನ ಮೇಲೆ ಶಿಂಗಣಮಕ್ಕಿಯ ಜನರು ಬಹಿಷ್ಕಾರ ಹಾಕಿದರು. ಆ ಶಿಕ್ಷಕನು ಊರ ಜನರ ಬಹಿಷ್ಕಾರಕ್ಕೆ ಹೆದರಿ, ಪೊಲೀಸರು ನೀರು ಸೇದಿಕೊಳ್ಳಲು ಕೊಡ ಕೇಳಲು ಬಂದಾಗ ಕೊಡ ಕೊಡಲು ಒಪ್ಪಲಿಲ್ಲ. ಪೊಲೀಸರು ಊರು ತುಂಬ ಅಲೆದಾಡಿದರು. ಒಂದು ಮನೆಯ ಹೊರಬದಿಗೆ ಯಾರೂ ಕಾಣಲಿಲ್ಲ. ಹೊರಗೆ ಒಂದು ಕೊಡ ಮಾತ್ರ ಇತ್ತು. ಆ ಕೊಡವನ್ನು ಕದ್ದು ಒಯ್ದು ಪೊಲೀಸರು ಬಾವಿಯಿಂದ ನೀರು ಸೇದುಕೊಳ್ಳುವಷ್ಟರಲ್ಲಿ ಆ ಮನೆಯ ಹೆಣ್ಣು ಮಗಳು ಹೊರಗೆ ಬಂದು, ಕೊಡವನ್ನು ಕದ್ದು ಒಯ್ದ ಪೋಲಿಸನಿಗೆ ಬಯ್ದು ಕೊಡವನ್ನು ಕಸಿದುಕೊಂಡು ಹೋದಳು, ಚಟ್ನಿ ಅರೆಯಲು ಕಲ್ಲು ಸಹ ಸಿಗಲಿಲ್ಲ. ಕೊನೆಗೆ ಏನೇನೋ ಮಾಡಿ ತಾವು ತಂದ ಅಕ್ಕಿ ಕುದಿಸಿ ಊಟ ಮಾಡಲು ಹೊತ್ತು ಮುಳುಗಿತು.

ಮಾಮಲೇದಾರರಂತಹ ತಾಲೂಕಿನ ಅಧಿಕಾರಿ ಕೂಡ ಊರ ಜನರ ಸಾಮೂಹಿಕ ಬಹಿಷ್ಕಾರದ ಎದುರು ಹೇಗೆ ನಿರ್ವೀರ್ಯರಾಗುತ್ತಾರೆಂಬದಕ್ಕೆ ಇದೊಂದು ಉದಾಹರಣೆಯಾಗಿದೆ.

"ತೀರ್ವೆ ತೆತ್ತವರ ಮೇಲೆ ಹಾಗೂ ಅಧಿಕಾರಿಗಳಿಗೆ ಸಹಕಾರ ನೀಡಿದ ಜನರ ಮೇಲೆ ಬಹಿಷ್ಕಾರ ಹಾಕುವ ಅಸ್ತ್ರವು ನಾಡವರ ಹಳ್ಳಿಗಳಲ್ಲಿ ಆ ಕಾಲಕ್ಕೆ ಅದೆಷ್ಟು ಪ್ರಚಲಿತವಿತ್ತೆಂಬುದು ಮೇಲಿನ ಘಟನೆಯಿಂದ ವ್ಯಕ್ತವಾಗುವುದು".

**ಮಾಡು ಕಟ್ಟಿ ಮದುಮಕ್ಕಳನ್ನು ಒಳಗೆ ಕರೆದು ತಂದರು :**

ಕರಬಂದಿ ಹೋರಾಟದ ಸಂದರ್ಭ, ಅಂಕೋಲಾ ತಾಲ್ಲೂಕು ಕರಬಂದಿ ಹೋರಾಟದ ಮುಂಚೂಣಿಯಲ್ಲಿತ್ತು. ಯಾವ ತ್ಯಾಗಕ್ಕೂ, ಎಂಥ ಹೋರಾಟಕ್ಕೂ ಜನ ಸಿದ್ಧವಾಗಿದ್ದರು.

ಅಂಕೋಲಾ ತಾಲ್ಲೂಕಿನ ಕಣಗಿಲ ಹಳ್ಳಿಯಲ್ಲಿ ಕರಬಂದಿ ಹೋರಾಟಗಾರ ಬೊಮ್ಮಯ್ಯ ರಾಮ ನಾಯಕರ ಮದುವೆ ಸಮಾರಂಭ. ಬೊಮ್ಮಯ್ಯ ನಾಯಕರ ಮದುವೆ ದಿಬ್ಬಣ ವಾಸ್ರೆ ಊರಿನಿಂದ (ಹೆಣ್ಣಿನ ಊರು ವಾಸ್ರೆಯಾಗಿತ್ತು) ಕಣಗಿಲಕ್ಕೆ ತಿರುಗಿ ಬರುವ ಹೊತ್ತಿಗೆ ಪೊಲೀಸರು ಅವರ ಮನೆಯನ್ನು ಜಪ್ತಿಮಾಡಿದ್ದರು. ಮನೆಯವರು ಕರಬಂದಿ ಚಳವಳಿಯಲ್ಲಿ ಭಾಗವಹಿಸಿದ್ದುದರಿಂದ ಮದುವೆಯ ಸಮಯ ನೋಡಿ ಮನೆಯನ್ನು ಜಪ್ತಿ ಮಾಡಿ ಸೀಲು ಮಾಡಿದ್ದರು. ದಿಬ್ಬಣದೊಡನೆ ವಧು ವರರು ಬಲಗಾಲು ಮುಂದಿಟ್ಟು ಮನೆಯನ್ನು ಪ್ರವೇಶ ಮಾಡುವ ಭಾವನಾತ್ಮಕ ಶುಭ ಗಳಿಗೆ ಅದಾಗಿತ್ತು. ಆ ಶುಭ ಮುಹೂರ್ತಕ್ಕೆ ಆತಂಕ ಎದುರಾಗಿತ್ತು, ಅಪಶಕುನದ ದುಗುಡ ಅವರಿಸಿತ್ತು.

ಮನೆಯ ಯಜಮಾನ ಮದುಮಗನ ತಂದೆ ರಾಮ ನಾಯಕರು ಕರಬಂದಿ ಮಾಡಿರುವುದನ್ನು ಒಪ್ಪಿಕೊಂಡು ಚಳವಳಿಯನ್ನು ಕೈ ಬಿಡಲು ಒಪ್ಪಿದರೆ ಜಪ್ತಿ ಮಾಡಿದ ಮನೆಯನ್ನು ತೆರವು ಮಾಡಿಕೊಡುವುದಾಗಿ ಪೊಲೀಸರು ತಿಳಿಸಿದರು. ಆದರೆ ವೀರ ಸತ್ಯಾಗ್ರಹಿಯಾದ ರಾಮ ನಾಯಕರು ಪೊಲೀಸರ ಮಾತನ್ನು ಒಪ್ಪಿಕೊಳ್ಳಲು ಸಿದ್ಧರಾಗಲಿಲ್ಲ. ಅವರು ಇಂತಹ ಆತಂಕದ ಸಮಯದಲ್ಲೂ ವೀರಯೋಧನ ಗುಣವನ್ನೇ ಮೆರೆದರು.

ಈ ಭಾವನಾತ್ಮಕ ಸಂದರ್ಭದ ಸೂಕ್ಷವನ್ನು ಗ್ರಹಿಸಿದ ಕಣಗಿಲದ ಜನರು ಕಣ್ಣು, ಕೈಗಳ ಸನ್ನೆಯಿಂದಲೇ ಪರಸ್ಪರ ಮಾತಾಡಿಕೊಂಡು ರಾಮನಾಯಕರ ನೆರೆಮನೆ ಪೊಕ್ಕನಾಯಕನ ಮನೆಯ ಬಾಜುವಿಗೆ ಹುಲ್ಲಿನ ಪಕ್ಕೆಯನ್ನು (ಮಾಡನ್ನು) ಕೇವಲ ಎರಡು ತಾಸುಗಳಲ್ಲಿ ಶರವೇಗದಿಂದ ನಿರ್ಮಿಸಿ ಮದುಮಕ್ಕಳನ್ನು ಮನೆಗೆ ಪ್ರವೇಶ ಮಾಡಿಸಿ ಪೋಲಿಸರು ಮಾಡಿದ ಅಮಂಗಳಕ್ಕೆ ಶುಭಮಂಗಳ ಹಾಡಿದರು.



ಈ ಘಟನೆ ಕರಬಂದಿ ವೀರರ ಸ್ವಾತಂತ್ರ್ಯದಾಹ, ಸಾಹಸ, ಔದಾರ್ಯಕ್ಕೆ ಹಿಡಿದ ಕನ್ನಡಿಯಾಗಿದೆ.

ಅಂಕೋಲೆಯ ಸ್ವಾತಂತ್ರ್ಯ ಸಮರದ ಸಾಹಸದ ಕಥೆಯನ್ನು ಎಲ್ಲರೂ ಮುದಗೊಂಡು ಕೇಳುವಂತಹದ್ದು, ಕೇಳಬೇಕಾದದ್ದು. ಪ್ರಧಾನವಾಗಿ ಹಳ್ಳಿಯ ಜನರೇ ಮುಂದಾಗಿ ಅಪೂರ್ವ ತ್ಯಾಗ, ಸಾಹಸ ಮೆರೆದು, ಕಷ್ಟವನ್ನು ಅನುಭವಿಸಿ ಬ್ರಿಟಿಷ್ ಸರ್ಕಾರವನ್ನು ಮಣಿಸಿದ ಕಥೆ ತುಂಬಾ ರೋಚಕವಾಗಿದೆ. ಸರ್ವಸ್ವವನ್ನು ತ್ಯಾಗ ಮಾಡಿ ಅಂಕೋಲೆಗೆ ಚರಿತ್ರೆಯಲ್ಲಿ ಗಣ್ಯ ಸ್ಥಾನವನ್ನು, ಕೀರ್ತಿಯನ್ನು ತಂದುಕೊಟ್ಟ ಸಾಮಾನ್ಯ ಜನರ ಅಸಾಮಾನ್ಯ ಕತೆಯಾಗಿದೆ.

ನಾವಿಂದು ಆ ಸಾಮಾನ್ಯ ಜನರ ಅಸಾಮಾನ್ಯ ಹೋರಾಟವನ್ನು ಮರೆತಿದ್ದೇವೆ. ಆ ಸಾಹಸಪೂರ್ಣ ರೋಮಾಂಚಕ ಚಳವಳಿ ವಿಸ್ಮೃತಿಗೆ, ಉಪೇಕ್ಷೆಗೆ ಗುರಿಯಾಗಿದೆ. ಇಂದು ನಾವು ಪಡೆದ ಸ್ವಾತಂತ್ರ್ಯವನ್ನು ಪ್ರೀತಿಸಿ ಗೌರವಿಸಬೇಕಾದ ಬಗೆಯಲ್ಲಿ ನಡೆದುಕೊಳ್ಳುತ್ತಿಲ್ಲ. ನಮ್ಮ ಅಭಿಮಾನದ ಇತಿಹಾಸವನ್ನು ಮರೆತಿದ್ದೇವೆ.

ಅಂಕೋಲೆಯ ಸ್ವಾತಂತ್ರ್ಯ ಹೋರಾಟದ ಕತೆಯಲ್ಲಿ ನಾಡವರು ಮುಂಚೂಣಿಯಲ್ಲಿದ್ದವರು. ಬಹುಸಂಖ್ಯಾತ ನಾಡವರು ಈ ನಿರಕ್ಷರಿ ಬಡವರಾದ ಹಳ್ಳಿಯ ಜನರು ಗಾಂಧೀಜಿಯವರ ಸಂದೇಶವನ್ನು ಶಿರದಲ್ಲಿ ಹೊತ್ತು ಪ್ರಾಣವನ್ನು ಪಣಕ್ಕಿಟ್ಟು, ಸ್ವಾತಂತ್ರ್ಯ ಸಮರದಲ್ಲಿ ಧುಮುಕಿ ಪಡಬಾರದ ಕಷ್ಟ ನೋವುಗಳನ್ನು ಸಹಿಸಿ ಜೈಲು ಸೇರಿ ಶಿಕ್ಷೆ ಅನುಭವಿಸಿ ಸ್ವಾತಂತ್ರ್ಯ ಪಡೆದು ಧನ್ಯರಾದ ಕಥೆ ಗಮನಾರ್ಹವಾಗಿದೆ.

ಸ್ವಾತಂತ್ರ್ಯದ ಅಮೃತ ಮಹೋತ್ಸವದ ಈ ಸಂದರ್ಭದಲ್ಲಿ ಅಂಕೋಲಾ ತಾಲ್ಲೂಕಿನ ಸ್ವಾತಂತ್ರ್ಯ ಸಂಗ್ರಾಮದ ತ್ಯಾಗ ಬಲಿದಾನಗಳ ವೀರೋಚಿತ ಕಥೆಯನ್ನು ನೆನಪಿಸಿಕೊಳ್ಳುವುದು ನಮ್ಮೆಲ್ಲರ ಕರ್ತವ್ಯವೂ ಉಚಿತವೂ ಆಗಿದೆ.

ಭಾರತದ ಸ್ವಾತಂತ್ರ್ಯ ಸಂಗ್ರಾಮದ ಚರಿತ್ರೆಯಲ್ಲಿ ಅಂಕೋಲಾ ತಾಲ್ಲೂಕಿನ ಪಾತ್ರ ಮಹತ್ವದ್ದಾಗಿದ್ದು ಅದಕ್ಕೆ ಚರಿತ್ರೆಯಲ್ಲಿ ಅಗ್ರಸ್ಥಾನವಿದೆ. ಆದುದರಿಂದ ಈ ಸಂದರ್ಭದಲ್ಲಿ ಅಂಕೋಲಾ ತಾಲ್ಲೂಕಿನ ಸ್ವಾತಂತ್ರ್ಯ ಸೇನಾನಿಗಳಿಗೆ ಗೌರವವನ್ನು

ಸಲ್ಲಿಸುತ್ತಾ, ಈಗಾಗಲೇ ಮರೆತ ವೀರ ಚರಿತ್ರೆಯನ್ನು ಅಭಿಮಾನದಿಂದ ನೆನಪಿಸಿಕೊಳ್ಳುತ್ತಾ, ಇತಿಹಾಸ ಮರೆತವರು ಇತಿಹಾಸ ನಿರ್ಮಿಸಲಾರರು ಎಂಬ ಡಾ. ಅಂಬೇಡ್ಕರರ ನುಡಿಯನ್ನು ನೆನೆಸಿಕೊಂಡು, ಇತಿಹಾಸ ನಿರ್ಮಿಸಲಿರುವ ನಮ್ಮ ಎಳೆಯ ತಲೆಮಾರಿನವರಿಗೆ ಈ ಕತೆ ದಾರಿದೀಪವಾಗಲಿ ಎಂದು ಹಾರೈಸುತ್ತೇನೆ.

**– ಶಾಂತಾರಾಮ ನಾಯಕ ಹಿಚಕಡ**

# ಅನುಬಂಧ


## ಛಾಯಾಚಿತ್ರಗಳು



ಅಂಕೋಲಾ ತಾಲೂಕಿನಲ್ಲಿ ಕರ ನಿರಾಕರಣೆ ಚಳವಳಿಯ ಮೊದಲಸಭೆ ಸೇರಿದ ಸೂರ್ವೆಯ ಕಳಸ ದೇವಸ್ಥಾನ



ಅಂಕೋಲಾದ ಇಟ್ಲಘಟ್ಟದಲ್ಲಿ ಜಂಗಲ್ ಸತ್ಯಾಗ್ರಹಿಗಳನ್ನು (ಆಗಸ್ಟ್ ೨೮, ೧೯೩೦) ಪೋಲಿಸರು ಮೆರವಣಿಗೆಯನ್ನು ತಡೆದ ದೃಶ್ಯ.



**ಅಂಕೋಲಾ ಕಾಂಗ್ರೆಸ್ ಕಾರ್ಯಾಲಯದಿಂದ (ಏಪ್ರಿಲ್ ೧೩, ೧೯೩೦) ಉಪ್ಪಿನ ಸತ್ಯಾಗ್ರಹಕ್ಕೆ ಹೊರಟ ಬೃಹತ್ ಮೆರವಣಿಗೆ**

**೧೯೩೦ರಲ್ಲಿ ಉಪ್ಪಿನ ಸತ್ಯಾಗ್ರಹದ ಚಳವಳಿ ನಡೆದ ಪೂಜಗೇರಿ ಬಯಲು**

## ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ
## ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

| ಕ್ರಸಂ. | ಪುಸ್ತಕದ ಹೆಸರು | ಲೇಖಕರ ಹೆಸರು | ಬೆಲೆ |
|---|---|---|---|
| ೧. | ತುರುವನೂರು | ಡಾ. ಪಿ. ಯಶೋದಾ ರಾಜಶೇಖರಪ್ಪ | ೩೦/– |
| ೨. | ಚಿತ್ರದುರ್ಗ | ಡಾ. ಬಿ. ರಾಜಶೇಖರಪ್ಪ | ೩೦/– |
| ೩. | ರಾಮಸ್ವಾಮಿ ವೃತ್ತ | ಮಂಜುನಾಥ ಹೆಚ್.ಎಲ್. | ೩೦/– |
| ೪. | ಸುಬ್ಬರಾಯನ ಕೆರೆ | ಡಾ. ಇಂದಿರಾ ಬಿ.ಪಿ. | ೩೦/– |
| ೫. | ಬದನವಾಳು | ಡಾ. ಇಂದಿರಾ ಬಿ.ಪಿ. | ೩೦/– |
| ೬. | ತಗಡೂರು | ಡಾ. ಎಚ್.ಎಸ್. ಉಷಾರಾಣಿ | ೩೦/– |
| ೭. | ಶಿವಪುರ | ಡಾ. ಲಿಂಗರಾಜು | ೩೦/– |
| ೮. | ಮಂಡ್ಯ | ಡಾ. ಶಿವರಾಮು ಎಸ್. | ೩೦/– |
| ೯. | ಚಾಮರಾಜನಗರ | ಡಾ. ಸುಂದ್ರೇಶ ಎನ್. | ೩೦/– |
| ೧೦. | ಗುಂಡ್ಲುಪೇಟೆ | ಕವಿತಾ ಎ. | ೩೦/– |
| ೧೧. | ಗೊರೂರು | ಡಾ. ಯೋಗೇಶ್ ಎನ್.ಇ. | ೩೦/– |
| ೧೨. | ಅರಸೀಕೆರೆ | ಡಾ. ಮಂಜುನಾಥ ಜಿ.ಆರ್. | ೩೦/– |
| ೧೩. | ಹೊಸರಿತ್ತಿ | ಡಾ. ಹೇಮಪ್ಪ ಬ. ಕೆಂಚಳ್ಳಿ | ೩೦/– |
| ೧೪. | ಕನ್ನೇಶ್ವರ | ಡಾ. ಚಾಮರಾಜ ಕಮ್ಮಾರ | ೩೦/– |
| ೧೫. | ಚಳ್ಳಕೂಡ್ಲೂರು | ರಾಮಣ್ಣ ಹವಳೆ | ೩೦/– |
| ೧೬. | ನ್ಯಾಷನಲ್ ಹೈಸ್ಕೂಲು | ಟಿ.ಕೆ. ತಿಮ್ಮರಾಜ ಶೆಟ್ಟಿ | ೩೦/– |
| ೧೭. | ಬನಪ್ಪ ಪಾರ್ಕ್ | ರಮೇಶ ದೊಡ್ಡಪುರ | ೩೦/– |

| | | | |
|---|---|---|---|
| ೧೮. | ಮಲ್ಲೇಶ್ವರ | ಕೆ.ಎಲ್. ನಟರಾಜ್ | ೩೦/– |
| ೧೯. | ದಂಡುಪ್ರದೇಶ | ಪ್ರಮೋದ್ ನ. ಗೋ. | ೩೦/– |
| ೨೦. | ದೇವನಹಳ್ಳಿ | ಕೆ.ಆರ್. ನರಸಿಂಹನ್ | ೩೦/– |
| ೨೧. | ದೊಡ್ಡಬಳ್ಳಾಪುರ | ಡಿ.ಎಂ. ಘನಶ್ಯಾಮ | ೩೦/– |
| ೨೨. | ರಾಮನಗರ | ಎಸ್. ಶರತ್ ಚಂದ್ರ | ೩೦/– |
| ೨೩. | ಕನಕಪುರ | ಡಾ. ಎಸ್.ಎಚ್. ಭುವನೇಶ್ವರ | ೩೦/– |
| ೨೪. | ಶ್ರೀನಿವಾಸಪುರ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೫. | ಬಂಗಾರಪೇಟೆ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೬. | ವಿದುರಾಶ್ವತ್ಥ | ಡಾ. ಎಸ್.ಜಿ. ರಾಮದಾಸ ರೆಡ್ಡಿ | ೩೦/– |
| ೨೭. | ಈಸೂರು | ಮಾರ್ಪಳ್ಳಿ ಆರ್. ಮಂಜುನಾಥ್ | ೩೦/– |
| ೨೮. | ನಗರ(ಬಿದನೂರು) | ಚಿನ್ಮಯ ಎಂ.ಸಿ. | ೩೦/– |
| ೨೯. | ಚನ್ನಗಿರಿ | ಡಾ. ಕೆಳದಿ ವೆಂಕಟೇಶ ಜೋಯಿಸ್ | ೩೦/– |
| ೩೦. | ದಾವಣಗೆರೆ | ಸಹನಾ ಚೇತನ್ | ೩೦/– |
| ೩೧. | ಸಿಂದಗಿ | ಡಾ. ರಮೇಶ ಎಸ್. ಕತ್ತಿ | ೩೦/– |
| ೩೨. | ಮಸಬಿನಾಳ | ಶಂಕರ ಬೈಚಬಾಳ | ೩೦/– |
| ೩೩. | ಸಾರವಾಡ | ಡಾ. ಸೋಮಶೇಖರ ವಾಲಿ | ೩೦/– |
| ೩೪. | ಹಲಸಂಗಿ | ಶ್ರೀ ಸುಮಿತ್ ಮೇತ್ರಿ | ೩೦/– |
| ೩೫. | ನರಗುಂದ | ಡಾ. ನಿಂಗು ಸೊಲಗಿ | ೩೦/– |
| ೩೬. | ಮುಂಡರಗಿ | ಡಾ. ಉಮೇಶ ತಿಮ್ಮಾಪುರ | ೩೦/– |



| | | | |
|---|---|---|---|
| ೩೭. | ಹಲಗಲಿ | ಡಾ. ವಿಜಯಶ್ರೀ ಇಟ್ಟಣ್ಣವರ | ೩೦/– |
| ೩೮. | ಬಿಸನಾಳ | ಡಾ. ವಿನಯಕುಮಾರ್ ಹಿರೇಮಠ | ೩೦/– |
| ೩೯. | ಬಾಗಲಕೋಟೆ | ರಾಮು ಮನಗೂಳಿ | ೩೦/– |
| ೪೦. | ಬಾದಾಮಿ | ಡಾ. ಪ್ರಕಾಶ ಗ. ಖಾಡೆ | ೩೦/– |
| ೪೧. | ಸುರಪುರ | ಶ್ರೀನಿವಾಸ ಜಾಲವಾದಿ | ೩೦/– |
| ೪೨. | ಕೆಂಭಾವಿ | ನಿಂಗನಗೌಡ ಹ. ದೇಸಾಯಿ | ೩೦/– |
| ೪೩. | ರಾಜನಕೋಳೂರು | ರಾಘವೇಂದ್ರ ಜಹಗೀರದಾರ | ೩೦/– |
| ೪೪. | ಭಾಲ್ಕಿ | ಡಾ. ರಘುಶಂಖ ಭಾತಂಬ್ರಾ | ೩೦/– |
| ೪೫. | ಗೋರಟಾ | ಷ.ಬ್ರ. ಡಾ. ರಾಜಶೇಖರ ಶಿವಾಚಾರ್ಯ ಸ್ವಾಮಿಗಳು | ೩೦/– |
| ೪೬. | ಕೇಂದ್ರ ಮೈದಾನ | ಡಾ. ವಸಂತಕುಮಾರ್ ಪೆರ್ಲ | ೩೦/– |
| ೪೭. | ರಾಮಶಾಲಾ ಬಯಲು | ರಾಮಣ್ಣ ಹವಳೆ | ೩೦/– |
| ೪೮. | ಉಳ್ಳಾಲ | ಡಾ. ಜ್ಯೋತಿ ಚೇಳ್ಯಾರು | ೩೦/– |
| ೪೯. | ಅಮರಸುಳ್ಯ | ಸಹನಾ ಕಾಂತಬೈಲು | ೩೦/– |
| ೫೦. | ಅಜ್ಜರಕಾಡು ಮೈದಾನ | ಡಾ. ಪೃಥ್ವೀರಾಜ ಕವತ್ತಾರು | ೩೦/– |
| ೫೧. | ಬಸರೂರು–ಕುಂದಾಪುರ | ಮಂಜುನಾಥ್ ಚಾಂದ್ | ೩೦/– |
| ೫೨. | ಪೊನ್ನಂಪೇಟೆ | ಸೊಮೆಯಂಡ ಕೌಸಲ್ಯ ಸತೀಶ್ | ೩೦/– |
| ೫೩. | ಮಡಿಕೇರಿ | ಪ್ರೊ. ಕೆ.ಆರ್. ದೀಕ್ಷಿತ್ | ೩೦/– |
| ೫೪. | ಅಜ್ಜಂಪುರ | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |
| ೫೫. | ಚಿಕ್ಕಮಗಳೂರು | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |

| | | | |
|---|---|---|---|
| ೫೬. | ಕಲಬುರಗಿ | ಡಾ. ಶಂಭುಲಿಂಗವಾಣಿ | ೩೦/– |
| ೫೭. | ಮುಧೋಳ–ಸೇಡಂ | ಮುಡಬಿ ಗುಂಡೇರಾವ | ೩೦/– |
| ೫೮. | ಅಂಕೋಲಾ | ಶಾಂತಾರಾಮ ನಾಯಕ | ೩೦/– |
| ೫೯. | ಶಿರಸಿ | ಪದ್ಮಾಕರ ಮಡಗಾಂವಕರ | ೩೦/– |
| ೬೦. | ಕಾರವಾರ | ಡಾ. ಉದಯ ಶಂಕರ ಪುರಾಣಿಕ | ೩೦/– |
| ೬೧. | ಬಳ್ಳಾರಿ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೨. | ಹೊಸಪೇಟೆ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೩. | ಕೊಟ್ಟೂರು | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೪. | ಕೂಡ್ಲಿಗಿ | ಡಾ. ಕೆ. ಸತೀಶ | ೩೦/– |
| ೬೫. | ಕಿತ್ತೂರು | ಪ್ರಕಾಶ ಗಿರಿಮಲ್ಲನವರ | ೩೦/– |
| ೬೬. | ಹುದಲಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೭. | ಬೆಳಗಾವಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೮. | ಹುಲಕುಂದ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೯. | ಬೆಂಗೇರಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೭೦. | ಕೊಪ್ಪಳ | ಮಹೇಶ ಬಳ್ಳಾರಿ | ೩೦/– |
| ೭೧. | ಗಂಗಾವತಿ | ರಮೇಶ ಸಿ. ಬನ್ನಿಕೊಪ್ಪ | ೩೦/– |
| ೭೨. | ಅಳವಂಡಿ | ಡಾ. ಪ್ರಕಾಶ ಬಳ್ಳಾರಿ | ೩೦/– |
| ೭೩. | ತುಮಕೂರು | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೪. | ಮಧುಗಿರಿ | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೫. | ತಾವರೆಕೆರೆ | ಪ್ರೊ. ಕೆ. ಪುಟ್ಟರಂಗಪ್ಪ | ೩೦/– |